UNIVERSAL
LIBRARY
OU_200588
UNIVERSAL
LIBRARY

ಕರ್ನಾಟಕ ಇತಿಹಾಸಮಂಡಲ, ಧಾರವಾಡ.

ಗ್ರಂಥ ೨.

# ಶ್ರೀ ವಿದ್ಯಾರಣ್ಯ ಚರಿತ್ರ

(ಕೀರ್ತನರೂಪ.)

ಲೇಖಕ

ಶ್ರೀ. ಬಾಳಾಚಾರ್ಯ ಸಕ್ಕರಿ

ಉರ್ಫ

ಶಾಂತಕವಿ

ಧಾರವಾಡ.

ಎರಡನೆಯ ಆವೃತ್ತಿ--ಪ್ರತಿ ೧೦೦೦

ಪ್ರಕಾಶಕ

ಶ್ರೀ ವೆಂಕಟೇಶ ಭೀಮರಾವ ಆಲೂರ.

ಬಿ. ಎ., ಎಲ್ ಎಲ್. ಬಿ.

ಮಂಗಳವಾರಪೇಠ ಪೋತನೀಸಗಲ್ಲಿ,

ಧಾರವಾಡ.

೧೯೧೬.

ಬೆಲೆ ೦-೧-೬

ನೂತನಗ್ರಂಥ

ಪುಟ ೧೬೦]   [ಬೆಲೆ ೧ [illegible]

# ಕರ್ನಾಟಕ-ಗತವೈಭವ

ಶ್ರೀ ವೆಂಕಟೇಶ ಭೀಮರಾವ ಆಲೂರ ಇವರು ಕರ್ನಾಟಕ ಇತಿಹಾಸವನ್ನು ಅಭ್ಯಾಸಮಾಡಲಿಚ್ಛಿಸುವವರಿಗೆ ಮಾರ್ಗದರ್ಶಿಯಾಗಬೇಕೆಂದು ಈ ಪುಸ್ತಕವನ್ನು ಬರೆದಿರುವರು.

ವೆಂಕಟೇಶ ಭೀಮರಾವ ಆಲೂರ

ವಕೀಲ ಧಾರವಾಡ.

# ಪೂರ್ವಪೀಠಿ

ಪ್ರಾಸಾದಿಕ ಕವಿಗಳಾದ ಬಾಳಾಚಾರ್ಯ ಸಕ್ಕರಿ ಉರ್ಫ ಶಾಂತಕವಿ ಇವರು ಸ್ವಯಂಸ್ಫೂರ್ತಿಯಿಂದ ಈ ಐತಿಹಾಸಿಕ ಕೀರ್ತನವನ್ನು ರಚಿಸಿ, ಕೀರ್ತನ ಪರಂಪರೆಗೆ ಹೊಸ ಹಾದಿಯನ್ನು ಹಿಡಿಸಿದರೆಂಬದು ನಿಜವಾಗಿ ಆನಂದದ ಮಾತು. ಅವರು ಈ ಕೀರ್ತನವನ್ನು ೮-೧೦ ವರ್ಷಗಳ ಮುಂಚೆ ನಾನು ಬರೆದ ಶ್ರೀವಿದ್ಯಾರಣ್ಯರ ಒಂದು ಚಿಕ್ಕ ಚರಿತ್ರದ ಆಧಾರದಿಂದ ರಚಿಸಿರುವದರಿಂದ, ಈ ಕೀರ್ತನದಲ್ಲಿ ಶ್ರೀವಿದ್ಯಾರಣ್ಯರ ಸಂಬಂಧವಾಗಿ ಇತ್ತೀಚೆಗೆ ಗೊತ್ತಾಗಿರುವ ಹೊಸ ಸಂಗತಿಗಳನ್ನು ಸೇರಿಸಲಿಕ್ಕೆ ಅವರಿಗೆ ಆಸ್ಪದವಾಗಿಲ್ಲ, ಆದರೂ ಶ್ರೀವಿದ್ಯಾರಣ್ಯರು ಮಾಡಿದ ಮುಖ್ಯ ರಾಜಕಾರ್ಯವಾದ ವಿಜಯನಗರದ ಸಿಂಹಾಸನ ಸ್ಥಾಪನೆಯು ಇದರಲ್ಲಿ ಪ್ರಾಮುಖ್ಯವಾಗಿ ಪ್ರತಿಬಿಂಬಿತವಾಗಿರುವದರಿಂದ, ಕರ್ನಾಟಕಸ್ಥರಲ್ಲಿ ಐತಿಹಾಸಿಕ ಅಭಿಮಾನವನ್ನು ಹುಟ್ಟಿಸಲಿಕ್ಕೆ ಈ ಕೀರ್ತನವು ಅತ್ಯಂತ ಉಪಯೋಗವುಳ್ಳದ್ದಾಗಿದೆ; ಹಾಗೂ ಆ ಪ್ರಕಾರ ಅದು ಹುಟ್ಟಿಸಹತ್ತಿರುತ್ತದೆಂಬದು, ಶಾಂತಕವಿಗಳು ಧಾರವಾಡ, ಹುಬ್ಬಳ್ಳಿ, ಗದಗ, ಬೆಟಗೇರಿ ಮುಂತಾದ ಸ್ಥಳಗಳಲ್ಲಿ ಸ್ವಂತ ಮಾಡಿದ ಕೀರ್ತನಗಳನ್ನು ಕೇಳಿದವರಿಗೆ ಚನ್ನಾಗಿ ಮನವರಿಕೆಯಾಗಿದೆ. ಕೀರ್ತನದ ಪೂರ್ವರಂಗದಲ್ಲಿ ಇವರು ಕರ್ನಾಟಕ ದೇಶದ ವಿಷಯವಾಗಿ ಕನ್ನಡಿಗರು ಯಾಕೆ ಅಭಿಮಾನ ತಾಳಬೇಕೆಂಬದನ್ನು ಮನೋರಂಜಕವಾಗಿ ಹೇಳಿರುವರು. ಈ ಪೂರ್ವಭಾಗವು ಕೀರ್ತನದ ಪ್ರಮಾಣದಿಂದ ತುಸು ದೊಡ್ಡದಾಗಿದ್ದರೂ ಕರ್ನಾಟಕದ ಅಭಿಮಾನವೇ ಈ ಕೀರ್ತನದ ಮುಖ್ಯ ವಿಷಯವೆಂಬ ದೃಷ್ಟಿಯಿಂದ ನೋಡಿದರೆ ಇದು ಕನ್ನಡಿಗರಿಗೆ ಬೋಧಪ್ರದವಾಗದೆ ಇರದು. ಇರಲಿ, ಶಾಂತಕವಿಗಳು ಇಂಥ [illegible]

ತರುಣರಂತೆ ಉತ್ಸಾಹಶಾಲಿ ಕೀರ್ತನ ಮಾಡುವದನ್ನು ನೋಡಿ, ಈ ವೃದ್ಧರಿಗೆ ವೃದ್ಧರನ್ನೂ ಕೂಡ ತರುಣರಂತೆ ಕುಣಿದಾಡಿಸುವ ಶಕ್ತಿ ಇರುತ್ತದೆಂದು ಯಾರು ಉದ್ಗಾರ ತೆಗೆಯಲಿಕ್ಕಿಲ್ಲ?

ಕರ್ನಾಟಕಸ್ಥರಲ್ಲಿ ಇತಿಹಾಸಾಭಿಮಾನವು ಬೆಳೆಯಲಿಕ್ಕೆ ಇಂಥ ಕೀರ್ತನಗಳು ಅವಶ್ಯವಾಗಿ ಬೇಕಾಗಿವೆ. ರುಕ್ಷವಾದ ಇತಿಹಾಸ ವಿಷಯವನ್ನು ಕಾವ್ಯಮಯವಾದ ಪುರಾಣ ಕೀರ್ತನಗಳಲ್ಲಿಯೂ ನಾಟಕಗಳಲ್ಲಿಯೂ ರೂಪಾಂತರಿಸುವದರಿಂದ, ಸಾಮಾನ್ಯಜನರಿಗೂ ಕೂಡ ಪೂರ್ವಜರ ಗತವೈಭವದ ಸ್ಮರಣೆಯುಂಟಾಗಿ, ಮುಂದಿನ ವೈಭವವನ್ನು ಪಡೆಯುವದಕ್ಕೆ ಅವರ ಸ್ಪೃಹೆಯುಚ್ಛ್ವಿ ಬರುವದೆಂಬದಕ್ಕೆ ಏನೂ ಸಂದೇಹವಿಲ್ಲ. ಕರ್ನಾಟಕದೊಳಗಿನ ಆಧುನಿಕ ಕವಿಗಳೂ ನಾಟಕಕರ್ತರೂ ಕೀರ್ತನಕಾರರೂ ಇತ್ತಕಡೆಗೆ ತಮ್ಮ ಮನಸ್ಸನ್ನು ಒಲಿಸಿ, ಶಾಂತಕವಿಗಳ ಮೇಲು ಪಂಕ್ತಿಯನ್ನು ತೀಡಿ ಇತಿಹಾಸಪರವಾದ ಪುಸ್ತಕಗಳನ್ನು ಬರೆದು ಕನ್ನಡ ವಾಙ್ಮಯವನ್ನು ಇತಿಹಾಸಮಯವಾಗಿ ಮಾಡಿದರೆ ಈ ಕರ್ನಾಟಕಇತಿಹಾಸಮಂಡಲದ ಕಾರ್ಯಕ್ಕೆ ಬಲುಮಟ್ಟಿಗೆ ನೆರವಾದಂತಾಗುತ್ತದೆ. ಆದುದರಿಂದ, ಕರ್ನಾಟಕದ ಅಭಿಮಾನವನ್ನು ತಾಳುವವರೆಲ್ಲರೂ ಕೈಲಾದಮಟ್ಟಿಗೆ ಈ ರೀತಿಯಿಂದ ನಮಗೆ ಸಹಾಯಮಾಡಬೇಕೆಂದು ನಾವು ಅವರಿಗೆ ಕೈಜೋಡಿಸಿ ಬೇಡಿಕೊಳ್ಳುತ್ತೇವೆ.

ಹಿಂದುಸ್ಥಾನವನ್ನು ಭಾಷಾತತ್ವದ ಮೇಲೆ ವಿಭಾಗಿಸಿಯೇ ಪ್ರತಿನಿಧಿ ಪ್ರಕಾರದ ಚಳವಳಿಯನ್ನು ನಡೆಸುವದು ಅವಶ್ಯವಾಗಿರುತ್ತದೆಂಬ ತತ್ವವು ಈಗೀಗ ಸರ್ವರಿಗೂ ಮಾನ್ಯವಾಗಹತ್ತಿದೆ. ಇಷ್ಟೇ ಅಲ್ಲ, ಯಾರು ಇಚ್ಛಿಸಲಿ, ಇಚ್ಛಿಸದಿರಲಿ, ಇಂದಿಲ್ಲ ನಾಳೆ ಆಪ್ರಕಾರದ ವಿಭಾಗಗಳು ಉಂಟಾಗುವದು ಅವಶ್ಯವೇ ಆಗಿರುತ್ತದೆ. ಆದುದರಿಂದ, ಭಾವೀವೈಭವದಲ್ಲಿ ಕರ್ನಾಟಕವು ಯೋಗ್ಯವಾಗಿ ತನ್ನ ಭಾರವನ್ನು ಹೊರುವದಕ್ಕೆ ಅರ್ಹವಾಗಬೇಕಾದರೆ ಕರ್ನಾಟಕಸ್ಥರು ತಮ್ಮ ಸ್ವತ್ವವ

ನ್ನು ಅಂದರೆ ಕರ್ನಾಟಕತ್ವವನ್ನು ತೀವ್ರವಾಗಿ ಅರಿತುಕೊಂಡು ವಿಶ್ವ ಜನಾಂಗದವರೊಡನೆ ಸಮಾನಸ್ಕಂಧರಾಗಿ ಕೆಲಸಮಾಡಲಿಕ್ಕೆ ಉದ್ಯುಕ್ತರಾಗಬೇಕಾಗುತ್ತದೆ. ಇಲ್ಲದಿದ್ದರೆ, ತಾವು ಹಿಂದುಳಿಯುವದರಿಂದ ಹಿಂದುಸ್ಥಾನವನ್ನು ಕೂಡ ಹಿಂದಕ್ಕೆ ಜಗ್ಗುವ ಮಹಾಪಾತಕಕ್ಕೆ ಗುರಿಯಾಗಬೇಕಾಗುವದೆಂಬವನ್ನು ಪ್ರತಿಯೊಬ್ಬರೂ ಮನಗಂಡು, ವಿಲಂಬ ಮಾಡದಲೆ ಕರ್ನಾಟಕಕ್ಕೆ ಸಂಜೀವನೀ ಮಾತ್ರೆಯನ್ನು ಕೊಡಬೇಕು.

ಕೀರ್ತನದ ಗದ್ಯಭಾಗವನ್ನು ಕೂಡ ಮುದ್ರಿಸಿದ್ದರೆ ಓದುವವರಿಗೆ ಇದು ಹೆಚ್ಚು ಸರಸವಾಗುತ್ತಿತ್ತೆಂದು ಅನೇಕರ ಅಭಿಪ್ರಾಯ. ಆದರೆ ಗದ್ಯಭಾಗವನ್ನು ಕೀರ್ತನಕಾರರು ತಮ್ಮ ಬುದ್ಧಿಬಲದಿಂದ ತಮಗೂ ಕೇಳುವವರಿಗೂ ಅನುರೂಪವಾಗುವಂತೆ ಸೇರಿಸಿಕೊಳ್ಳುವದು, ಕೀರ್ತನಕಾರರ ಸಾಂಪ್ರದಾಯವಿರುವದರಿಂದ. ಕಾಗದದ ಬೆಲೆಯು ಮಿತಿಮೀರಿ ಬೆಳೆದ ಈಗಿನ ದಿವಸಗಳಲ್ಲಿ ಈ ಕೀರ್ತನದ ಗದ್ಯಭಾಗವನ್ನು ಮುದ್ರಿಸುವ ಗೋಜಿಗೆ ನಾವು ಹೋಗಿಲ್ಲ. ಆದರೂ ಕಥಾಪ್ರಸಂಗವು ವಾಚಕರ ಲಕ್ಷ್ಯದಲ್ಲಿ ಬರಬೇಕೆಂದು ನಾವು ಅದರ ಸಾರಾಂಶವನ್ನು ಇವರಡಿ ಕೊಡುತ್ತೇವೆ.

ಕನ್ನಡಿಗರಿಗೆ ಕರ್ನಾಟಕವೇ ಅತ್ಯಂತ ಅಭಿಮಾನಾಸ್ಪದವಾದ ವಸ್ತುವು. ಕರ್ನಾಟಕ ದೇಶ, ಭಾಷೆ, ಇತಿಹಾಸ ಮುಂತಾದವುಗಳ ಬಗ್ಗೆ ಅಭಿಮಾನ ತಾಳುವದೇ ಅವರ ಆದ್ಯಕರ್ತವ್ಯವು. ಆದರೆ, ಕನ್ನಡಿಗರು ಈ ತತ್ವವನ್ನು ಈಗ ಮರೆತಿರುವದರಿಂದ ಅದನ್ನು ಅವರಿಗೆ ತಿಳಿಸುವದಕ್ಕಾಗಿ ಕೀರ್ತನಕಾರರು ಕೀರ್ತನಾರಂಭದಲ್ಲಿ ಕೇಳಕ್ಕ, ಹೇಳಕ್ಕ ಎಂಬೆರಡು ಪಾತ್ರಗಳನ್ನು ಕಲ್ಪಿಸಿರುವರು. ಕರ್ನಾಟಕವೇ ಕನ್ನಡಿಗರ ನಿಜವಾದ ವಸ್ತುವೆಂಬವನ್ನು ಹೇಳಕ್ಕನ ಬಾಯಿಯಿಂದಲೇ ಹೊರಡಿಸಬೇಕೆಂದು, ಉತ್ಕಟಾಭಿಮಾನಿಯಾದ ಕೇಳಕ್ಕನ ಕುತೂಹಲ. ಅದಕ್ಕೋಸ್ಕರ ಅವಳು ಹೇಳಕ್ಕನಿಗೆ ನಿನಗೆ ಸೌಖ್ಯವನ್ನೂ ಕೀರ್ತಿಯನ್ನೂ ಸ್ಫೂರ್ತಿಯನ್ನೂ ಕೊಡುವ ಆ ನಿನ್ನ ವಸ್ತುವು ಯಾವುದೆಂಬ

ದನ್ನು ಹೇಳು ನೋಡುವಾ,, ಎಂದು ಪ್ರಶ್ನೆಮಾಡುತ್ತಾನೆ ಅದಕ್ಕೆ ಹೊಲ
ಮನೆ ಹೆಂಡಿರುಮಕ್ಕಳು ಇವೇ ತನ್ನ ವಸ್ತುಗಳೆಂದು ಹೇಳಪ್ಪನು ಹೇಳ
ಲಾಗಿ, ಅವನ ಈ ಕೂಪಮಂಡೂಕವೃತ್ತಿಯಂಥ ಸಂಕುಚಿತದೃಷ್ಟಿ
ಗಾಗಿ ಅವನನ್ನು ಜರಿದು ,,ಇವೆಲ್ಲವನ್ನೂ ಒಳಗೊಂಡಿರುವದೊಂದು
ನಿನ್ನ ವಸ್ತುವಿರುವದು. ಅದನ್ನು ಹೇಳು'' ಎಂದು ಕೇಳುತ್ತಾನೆ.
ಹೀಗೆ ಅವನ ಬಾಯಿಯಿಂದಲೇ ವ್ಯಾಪಕವಾದ ಉತ್ತರಗಳನ್ನು ತೆಗೆ
ದುಕೊಂಡು ಅವನ ಮನಸ್ಸನ್ನು ವಿಕಾಸಗೊಳಿಸಿ, ನಮಗೆಲ್ಲರಿಗೂ
ಅತ್ಯಂತಪ್ರಿಯವಾದ ಆ ಪವಿತ್ರತಮ ಭರತಭೂಮಿಯಲ್ಲಿ ಎದು ತೋ
[illegible]ಗಳಾಗಿ ಬಿದ್ದಿರುವ ಕರ್ನಾಟಕ ದೇಶವೆಂಬುದೇ ಕನ್ನಡಿಗರ ವಸ್ತು
ವೆಂದೂ ಅದನ್ನೇ ತಿಳಿಯಬೇಕೆಂದೂ ಹೇಳುತ್ತಾನೆ. ಅನಂತರ, ದಕ್ಷಿಣ
ಕ್ಕೆ ಕಾವೇರಿ, ಉತ್ತರಕ್ಕೆ ಗೋದಾವರಿ, ಪಶ್ಚಿಮಕ್ಕೆ ಸಮುದ್ರ ಮತ್ತು
ಪೂರ್ವಕ್ಕೆ ನಡುಕಾವೇರಿಯಿಂದ ನಡುಗೋದಾವರಿಯವರೆಗೆ ತೆಗೆದ
ಕಲ್ಪಿತ ರೇಷೆ ಇವೇ ಆ ಕರ್ನಾಟಕದ ಗಡಿಗಳೆಂದೂ ಈ ಕರ್ನಾಟಕ
ದಲ್ಲಿಯೇ ಕದಂಬ, ಗಂಗ, ಚಲುಕ್ಯ, ರಾಷ್ಟ್ರಕೂಟ, ಚಾಲುಕ್ಯ, ಯಾ
ದವ, ಬಲ್ಲಾಳ, ವಿಜಯನಗರ ಮುಂತಾದ ರಾಜವಂಶಗಳು ವೈಭವ
ದಿಂದ ಆಳಿದವೆಂದೂ (ಕರ್ನಾಟಕವೈಭವವೆಂಬ ನನ್ನ ಪುಸ್ತಕ ನೋಡಿ
ರಿ) ಸ್ತುತಿಸಿ ಇಂಥ ಕರ್ನಾಟಕದೇವಿಗೆ ಸಾಷ್ಟಾಂಗವೆರಗಿ ಪ್ರಾರ್ಥಿಸಿ
ಕೊಳ್ಳುವದಕ್ಕೆ ಹೇಳುತ್ತಾನೆ.

ಹೀಗೆ ಪೂರ್ವಪೀಠಿಕೆಯು ಮುಗಿದ ಬಳಿಕ, ಕೀರ್ತನಕಾರರು ರಸಿಕ
ವೃಂದವನ್ನು ಶ್ರೀವಿದ್ಯಾರಣ್ಯರು ತಪಶ್ಚರ್ಯ ಮಾಡಿದ ,,ಸನ್ಯಾಸಿದಿ
ಬ್ಬ''ವೆಂಬ ದಿನ್ನಿಗೆ ಕರೆದೊಯ್ದು, ಆ ಅಪ್ರತಿಮ ಪುರುಷರ ಪರಿಚಯ
ವನ್ನು ಮಾಡಿಕೊಡುತ್ತಾರೆ. ಶ್ರೀವಿದ್ಯಾರಣ್ಯರ ಪೂರ್ವಾಶ್ರಮದ ಹೆಸ
ರು ಮಾಧವಾಚಾರ್ಯ. ಇವರಿಗೆ ಸಾಯಣ ಮತ್ತು ಭೋಗನಾಥ
ಎಂಬವರು ತಮ್ಮಂದಿರು. ಇವರೆಲ್ಲರು ಅತಿ ಬಡತನದಲ್ಲಿ ಕಾಲಕಳೆ
ದರು. ಆಗ ಮಾಧವಾಚಾರ್ಯರು ಲಕ್ಷ್ಮಿಯನ್ನು ಪ್ರಸನ್ನೀಕರಿಸಿಕೊ

ಳ್ಳುವದಕ್ಕಾಗಿ ಹಂಪಿಯ ಭುವನೇಶ್ವರಿ ದೇವಾಲಯದಲ್ಲಿ ತಪಶ್ಚರ್ಯ ಮಾಡಿದರು. ಆವಳು ಪ್ರಸನ್ನಳಾಗಿ "ನಿನಗೆ ಈ ಜನ್ಮದಲ್ಲಿ ದರಿದ್ರತೆಯು ತಪ್ಪದು. ಜನ್ಮಾಂತರದಲ್ಲಿ ಮಾತ್ರ ನೀನು ಪರರಿಗೆ ವರಗಳನ್ನು ಕೊಟ್ಟರೆ ಅವರು ಐಶ್ವರ್ಯವಂತರಾಗುವಂಥ ಸಾಮರ್ಥ್ಯವು ನಿನ್ನಲ್ಲಿ ಬರುವದು" ಎಂದು ವರವನ್ನು ಕೊಟ್ಟಳು. ಅವರು ತಮ್ಮ ಸ್ಥಳಕ್ಕೆ ಮರಳಿ ಬಂದು ನೋಡುವಷ್ಟರಲ್ಲಿ ತಮ್ಮ ತಮ್ಮಂದಿರಾದ ಭೋಗನಾಥರು ಸನ್ಯಾಸವನ್ನು ಸ್ವೀಕರಿಸಿದ ಸುದ್ದಿಯನ್ನು ಕೇಳಿದರು. ಅಲ್ಲಿಂದ ಶೃಂಗೇರಿಗೆ ಹೋಗಿ ತಾವೂ ವಿದ್ಯಾತೀರ್ಥರಿಂದ ಸನ್ಯಾಸ ಸ್ವೀಕರಿಸಿದರು. ಅವರು ಸನ್ಯಾಸದೀಕ್ಷೆಯನ್ನು ತೆಗೆದುಕೊಂಡದ್ದರಿಂದ ಅವರಿಗೆ ಜನ್ಮಾಂತರವಾದಂತಾಗಿ ಅವರಲ್ಲಿ ಪರರಿಗೆ ವರವನ್ನು ಕೊಡುವ ಸಾಮರ್ಥ್ಯವು ಉಂಟಾಯಿತು.

ಮಾಧವಾಚಾರ್ಯರು ಸನ್ಯಾಸವನ್ನು ಸ್ವೀಕರಿಸಿದಾಗ ಅವರಿಗೆ ಶ್ರೀ ವಿದ್ಯಾರಣ್ಯರೆಂಬ ಅಭಿಧಾನವು ಪ್ರಾಪ್ತವಾಯಿತು. ಈ ಬಗೆಯಾಗಿ ಸನ್ಯಾಸ ದೀಕ್ಷೆಯಿಂದ ಶೃಂಗೇರಿಯಲ್ಲಿ ಇರುವಾಗ ಹರಿಹರನೆಂಬವನು ಅಲ್ಲಿಗೆ ಧಾವಿಸುತ್ತ ಬಂದು ಮುಸಲ್ಮಾನರು ಉತ್ತರ ದೇಶದಲ್ಲಿ ನಡೆಸಿದ ಅನಾಹುತಗಳೆಲ್ಲವನ್ನು ಮನೋವೇಧಕವಾಗಿ ವರ್ಣಿಸಿ ಆನೆಗೊಂದಿಯ ಅರಸನಾದ ಜಂಬುಕೇಶ್ವರನು ಅವರೊಡನೆ ಕಲಿತನದಿಂದ ಕಾದಿ ವೀರ ಸ್ವರ್ಗವನೆಯ್ದುದರಿಂದ ದೇಶದಲ್ಲೆಲ್ಲ ಅರಾಜಕತೆಯುಂಟಾಗಿರುವದೆಂದು ಹೇಳಿ "ಇಂಥ ಬಿಕ್ಕಟ್ಟಿನ ಸ್ಥಿತಿಯಲ್ಲಿ ಭರತಭೂಮಿಯನ್ನು ಉದ್ಧರಿಸುವ ಮಹಾತ್ಮರು ಯಾರೂ ಜಗತ್ತಿನಲ್ಲಿ ಇಲ್ಲವೆ? ಇದ್ದರೆ ಅವರು ಎದ್ದು ಬರಬೇಕು." ಎಂದು ಆಕ್ರೋಶ ಮಾಡಿದನು. ಆಗ ಭೂತದಯಾಪರರಾದ ಶ್ರೀವಿದ್ಯಾರಣ್ಯರು ಸಾಯಣನಿಗೆ "ಇವು ಕೇವಲ ವೇದಾಂತವನ್ನೋದುತ್ತ ಕೂಡುವ ದಿವಸಗಳಲ್ಲ; ಮೋಕ್ಷಸಾಧನೆಯುವದಕ್ಕೆ ಇಹಲೋಕದ ಸ್ವಾತಂತ್ರ್ಯತೆಯು ಅವಶ್ಯವಾದ ಸಾಧನವು. ನಮ್ಮ

ಸತ್ವವನ್ನು ಕಾಯ್ದುಕೊಳ್ಳದಿದ್ದರೆ ಆ ತತ್ವಾರ್ಥವನ್ನು ಪಠಿಸಿದ್ದೆಲ್ಲವೂ ಗಾಳಿಯಗಂಟೇ ಸರಿ." ಎಂದು ಮುಂತಾಗಿ ಉಪದೇಶಿಸಿ. ವೇದಾಂತ ಗಂಟುಗಳನ್ನು ಕೆಲದಿವಸ ಕಟ್ಟಿಟ್ಟು, ಹಂಪೆಗೆ ಬಂದು, ನಿರ್ವೀರ್ಯರಾದ ಜನರಿಗೆ ಸ್ವರಾಜ್ಯತತ್ವಗಳನ್ನು ಉಪದೇಶಿಸಿ ಹುರುಪುಗೊಳಿಸಿದರು. ಅನಂತರ, ಶ್ರೀವಿದ್ಯಾರಣ್ಯರು ತಮಗೆ ಭುವನೇಶ್ವರಿಯು ಕೊಟ್ಟ ವರಪ್ರಸಾದದಿಂದ ಚಿನ್ನದ ಮಳೆಗರೆಸಿ ದೇಶವನ್ನು ಐಶ್ವರ್ಯವಂತವಾಗಿ ಮಾಡಿದರು. ಹಾಗು ಮುಂದೆ ಚಿಕ್ಕ ಪುಟ್ಟ ರಾಜರಲ್ಲಿ ಒಕ್ಕಟ್ಟನ್ನು ಹುಟ್ಟಿಸಿ ಮುಸಲ್ಮಾನರನ್ನು ಓಡಿಸಿ ವಿಜಯನಗರ ರಾಜ್ಯಸ್ಥಾಪನೆಯನ್ನು ಮಾಡಿದರು ಮತ್ತು ಶೃಂಗೇರಿಗೆ ಓಡಿ ಬಂದು ತಮಗೆ ಶರಣಾಗತನಾದ ಹರಿಹರನಿಗೆ ಪಟ್ಟಕ್ಕೆ ಕುಳ್ಳಿರಿಸಿದರು. ಹೀಗೆ ರಾಜ್ಯಸ್ಥಾಪನೆಯನ್ನು ಮಾಡಿ ಆಮೇಲೆ ಪುನಃ ತಾವು ಸ್ವ ವೇದಾಂತದಲ್ಲಿ ಮಗ್ನರಾದರು. ಇವೆಲ್ಲ ಸಂಗತಿಗಳು ಈ ಚಿಕ್ಕ ಕೀರ್ತನದಲ್ಲಿ ಬಲು ಸುರಸವಾಗಿ ವರ್ಣಿತವಾಗಿವೆ.

ಈ ರೀತಿಯಾಗಿ, ಭರತಭೂಮಿಯ ಉತ್ಕಟವಾದ ಅಭಿಮಾನದೊಂದಿಗೆ ಕರ್ನಾಟಕದ ಯೋಗ್ಯ ಅಭಿಮಾನವನ್ನು ತಾಳುವದಕ್ಕೆ ಉಪದೇಶಿಸುವ ಈ ಸುರಸವಾದ ಚರಿತ್ರವನ್ನು ಓದಿಯೂ ಕೇಳಿಯೂ ಕನ್ನಡಿಗರು ಸಂತೋಷಬಟ್ಟು ಕರ್ನಾಟಕವನ್ನು ಉದ್ಧರಿಸಬೇಕೆಂದು ನಮ್ಮ ಪ್ರಾರ್ಥನೆ.

**ಧಾರವಾಡ.**

ತಾ ೩।೧।೧೮

**ವೆಂಕಟೇಶ, ಭೀಮರಾವ ಆಲೂರ**

ಅಧ್ಯಕ್ಷ

ಕರ್ನಾಟಕ ಇತಿಹಾಸ ಮಂಡಲ, ಧಾರವಾಡ.

# ಪುನರ್ಮುದ್ರಣದ ಪ್ರಸ್ತಾವನೆ

—→ :(:o:): ←—

ಈ ಚಿಕ್ಕ ಪುಸ್ತಕವನ್ನು ಮುದ್ರಿಸಿದ ನಾಲ್ಕೈದು ತಿಂಗಳುಗಳಲ್ಲಿಯೇ ಅದನ್ನು ಮತ್ತೆ ಮುದ್ರಿಸುವ ಸುಯೋಗವು ಬಂದೀತೆಂದು ಯಾರು ತಾನೇ ಬಗೆದಿದ್ದರು? ಆದರೆ ಶಾಂತಕವಿಗಳು ಸ್ವಂತ ತಾವೇ ಟೊಂಕ ಕಟ್ಟಿಕೊಂಡು ನಿಂತು ಈ ಕೀರ್ತನಗಳನ್ನು ಮಾಡಿದ್ದರಿಂದ ಕನ್ನಡಿಗರಲ್ಲಿ ಸ್ಫೂರ್ತಿಯು ಹೆಚ್ಚಿತೆಂದೂ ಈ ಪುನರ್ಮುದ್ರಣದ ಯೋಗವು ಆ ಸ್ಫೂರ್ತಿಯ ಪರಿಣಾಮವೇ ಎಂದೂ ನಿಃಸಂದೇಹವಾಗಿ ಹೇಳಬಹುದು. ಕರ್ನಾಟಕದೊಳಗಿನ ಕೀರ್ತನಕಾರರು ಈ ಕೀರ್ತನವನ್ನು ಹೋದ ಹೋದಲ್ಲಿ ಮಾಡಿ ತೋರಿಸಿದರೆ ಅವರು ನಮ್ಮ ಇತಿಹಾಸಮಂಡಲಕ್ಕೆ ಸಹಾಯ ಮಾಡಿದ ಪುಣ್ಯವನ್ನು ಕಟ್ಟಿಕೊಂಡಂತಾಗುವದು.

ನಾಲ್ಕನೆಯ ಸಮ್ಮೇಲನದ ಅಧ್ಯಕ್ಷರಾದ ರಾವಬಹಾದ್ದೂರ ಆರ್. ನರಸಿಂಹಾಚಾರ್ಯರು ಇಲ್ಲಿಗೆ ಬಂದಾಗ ಅವರು ಈ ಕೀರ್ತನದೊಳಗೆ ಉಲ್ಲೇಖಿಸಿದ ಐತಿಹಾಸಿಕ ಸಂಗತಿಗಳಲ್ಲಿಯ ಒಂದೆರಡು ದೋಷಗಳನ್ನು ತೋರಿಸಿಕೊಟ್ಟರಂತೆ. ಅವುಗಳ ಬಗ್ಗೆ ನಾನೇ ಹೊಣೆಗಾರನಲ್ಲದೆ ಶಾಂತಕವಿಗಳು ಹೊಣೆಗಾರರಲ್ಲವೆಂಬುದನ್ನು ಹೋದ

ಪ್ರಸ್ತಾವನೆಯಲ್ಲಿ ಹೇಳಿರುವೆನಷ್ಟೇ. ಆದರೆ ಅವು ಯಾವವೆಂಬದು ನನಗೆ ಗೊತ್ತಾಗದ್ದರಿಂದ ಆ ಬಗ್ಗೆ ವಿಚಾರ ಮಾಡಿ ತಿದ್ದಲಿಕ್ಕೆ ನನಗೆ ಅವಕಾಶ ಉಳಿಯಲಿಲ್ಲ. ಆ ನನ್ನ ಪುಸ್ತಕದಲ್ಲಿ ಕೊಟ್ಟ ಶ್ರೀ ವಿದ್ಯಾರಣ್ಯರ ಜನ್ಮ ತಿಥಿಯು ತಪ್ಪಿರುವದೆಂದು ನನಗೆ ತಿಳಿದುಬಂದುದರಿಂದ, ಶಾಂತಕವಿಗಳ ಅಪ್ಪಣೆಯನ್ನು ಪಡೆದುಕೊಂಡು ನಾನು ಈ ಕೀರ್ತನದಲ್ಲಿಯ ಒಂದೆರಡು ಸಾಲುಗಳನ್ನು ತೆಗೆದು ಹಾಕಿರುವೆನು. ಬೇರೆಯಾವ ಹೆಚ್ಚು ಕಡಿಮೆಯೂ ಇದರಲ್ಲಿ ಆಗಿರುವದಿಲ್ಲ.

ಹಿಂದಿನ ಪುಸ್ತಕದಂತೆ ಇದು ಲೋಕಾದರಕ್ಕೆ ಪಾತ್ರವಾಗಿ ಕನ್ನಡಿಗರಲ್ಲಿ ಐತಿಹಾಸಿಕ ಅಭಿಮಾನವನ್ನು ಬೆಳಿಸಲೆಂದು ನಾನು ಪ್ರಾರ್ಥಿಸುತ್ತೇನೆ.

ವೆಂಕಟೇಶ ಭೀಮರಾವ
ಆಲೂರ.

ಅಧ್ಯಕ್ಷ.
ಕರ್ನಾಟಕ ಇತಿಹಾಸ ಮಂಡಲ ಧಾರವಾಡ.

ಧಾರವಾಡ
ತಾ॥ ೧೪-೧೧-೧೮

ಶ್ರೀಃ

# ಶ್ರೀ ವಿದ್ಯಾರಣ್ಯಚರಿತ್ರ.

## ಕೀರ್ತನ.

### ಇಷ್ಟದೇವತಾ ಭಜನ.

(ರಾಗ)

ಜಯ ಜಯ ಜಯ ಭುವನೇಶ್ವರಿ ॥ ಪಲ್ಲ ॥

ಜಯ ಭುವನೇಶ್ವರಿ ।

ಜಯ ಮಾಹೇಶ್ವರಿ ।

ಜಯ ಕೃಪಾಕರೆ ।

ಶುಭಕರೆ ಶ್ರೀಕರೆ ॥ ಅನುಪಲ್ಲ ॥

ಭೂಸುರ ಪಾಲನ ।

೧

ನಾಶಾ ಪಾಶನ ।

ನಾಶಗೊಳಿಸಿ ನ ।

ನ್ಯಾಸಿಯ ಮಾಡಿದಿ ॥ ೧ ॥

ವರವಿದ್ಯಾರ ।

ಣ್ಯರ ತಪಕೊಲಿದೆ ।

---

೧ ಆಶಾ.

ಸುರಿಸಿದೆ ಚಿನ್ನದ ।
ಸರಿಯಂ[೧] ಧರೆಯೊಳು ॥ ೨ ॥
ನೆರೆ ಕನ್ನಡದರ ।
ಸರ ಬೆಳ್ಜಸಮಂ[೨] ।
ಧರೆಯೊಳು ಸಲೆ ಸು ।
ಸ್ಥಿರಗೊಳಿಸಿದವಳೆ ॥ ೩ ॥

ಕೀರ್ತನಾರಂಭದಲ್ಲಿ ಉಪದೇಶ—

॥ ಪದ ॥

ನಿನ್ನ ವಸ್ತುವಂ ನೋಡು ನೋಡು ॥ ಪಲ್ಲ ॥
ನಿನ್ನ ವಸ್ತುವಂ ನೋಡು ।
ಮಮತೆಯ ಮಾಡು ।
ಸಲೆ ಕಾಪಾಡು ॥ ಗೆಳೆಯಾ ॥ ಅನುಪಲ್ಲ ॥

ನಿನ್ನ ವಸ್ತುವು ಎಂಥದೆಂದರೆ—
ನಿನಗದು ಸೌಖ್ಯದ ಬೀಡು ।
ಸುಕೃತಿಗಳ[೩]ೀಡು ।
ಕೀರ್ತಿಯಹಾಡು ॥ ಗೆಳೆಯಾ ॥ ೧ ॥

---

೧ ಸರಿ = ಮಳೆ. ೨ ಬೆಳ್ಜಸ = ಶುಭ್ರವಾದ ಯಶಸ್ಸು. ೩ ಈಡು = [illegible] (ಸಮಾನ)

ಪೂರ್ವಜರುಚ್ಚಜ್ಯೋತಿ।
ಭಾವೀ ನೀತಿ।
ಜನ್ಮ ವಿಭೂತಿ ॥ ಗೆಳೆಯಾ ॥ ೨ ॥
ಆತ್ಮಸ್ಫೂರ್ತಿಯ ತೇಜ।
ಜ್ಞಾನದ ಬೀಜ।
ಜೀವದ ರಾಜ ॥ ಗೆಳೆಯಾ ॥ ೩ ॥
ಮೃತ ಸಂಜೀವನ ಸಾರ।
ಹೃತ್[೧] ಕಾಸಾರ।
ಸ್ವಂತವಿಹಾರ ॥ ಗೆಳೆಯಾ ॥ ೪ ॥

ಅದನ್ನು ನೀನು ನೋಡಿದಿಯೆಂದರೆ—

ಬರುವದು ಕಳೆ ಮೊಗದಲ್ಲಿ।
ಧೃತಿ ಮನದಲ್ಲಿ।
ಬಲ ಮೈಯಲ್ಲಿ ॥ ಗೆಳೆಯಾ ॥ ೫ ॥
ಪುರುಷಾರ್ಥಂಗಳು ನಾಲ್ಕು ॥
ದೊರೆವವು ಸಾಕು।
ಹೆಚ್ಚೇಂ ಬೇಕು ॥ ಗೆಳೆಯಾ ॥ ೬ ॥
ಅದು ಕಣ್ಣಿಗೆ ಬಲು ಚಂದ।
ಹಿತವದರಿಂದ।
ನಂಬುಗೆಯಿಂದ ॥ ಗೆಳೆಯಾ ॥ ೭ ॥

---

೧ ತುಂಬಿದ ಸರೋವರ.

ಕೇಳಪ್ಪ —

॥ ರ ಪ. ॥

ನಿನ್ನ ವಸ್ತುವಂ ।
ಬಣ್ಣಿಸಿದೆಸು ನಾ ।
ನಿನ್ನಾದರು ಮೆಲೆ ಕನ್ನಡಿಗಾ ॥
ನಿನ್ನಯ ಸಹಿಸುಡಿ ।
ಯಿಂ ನಡೆ ಪೇಳ್ದೈ ।
ನಿನ್ನ ವಸ್ತುವಂ ನೋಡಿಗಡ ॥ ೧ ॥

ಹೇಳಪ್ಪ—

॥ ಕಾಪಿ ॥ (ರಗಳೆಯಂತೆ)

ಹೊಲಮನೆಗಳು ಹೆಂ ।
ಗಳು ಮಕ್ಕಳು ಮರಿ ।
ಗಳು ಧನಧಾನ್ಯಂ ॥
ಗಳಂಬರಂಗಳು ।
ಇವೇ ನನ್ನ ವಸ್ತುಗಳಯ್ಯಾ ॥ ೧ ॥

ಕೇ—(ಮನಸ್ಸಿನಲ್ಲಿ)

॥ ಸಾಕಿಯಂತೆ ॥

ಅಯ್ಯೋ! ಈತನ ಕಣ್ಣಿದು ಕಣ್ಣೇ ।
ನಯ್ಯಾ! ಈತನದೇನು ನುಡಿ! ॥
ಅಯ್ಯೋ! ಬಾಳುವೆಯಿದು ಬಾಳುವೆಯೇ ।
ನಯ್ಯಾ! ಇವಗೆಲ್ಲಿಹುದು ಪಡೆ ॥ ೨ ॥

ವಾಸ್ತವವದೆ, ಯಾಕಂದರೆ: —

॥ ದ್ವಿಪದೆ ॥

[೧]ಹರಿಗೆ ನಿಜ ಕೊಪವೇ ಬ್ರಹ್ಮಾಂಡವಾಗಿ ।
ಸೆರೆ ತೋರ್ಪುದೇ ನಿಶ್ಚಯವು ಸತ್ಯವಾಗಿ ॥ ೧ ॥

(ಗಟ್ಟಿಸಿ) ಗೆಳೆಯಾ! ಈ ನಿಂನ ವಸ್ತುಗಳು—

॥ ಪದ ॥

[೨]ಇವುಗಳಿರುವವದರಲ್ಲಿ ।
ತಿಳಿ ಮನದಲ್ಲಿ ।
ಪೇಳ್ [೩]ಜಪದಲ್ಲಿ ॥ ಗೆಳೆಯಾ ॥ ೧ ॥

ಹೇ—

॥ ದ್ವಿಪದೆ ॥

ಆದರೊಳಹವೆಂದರೇನೇತರೊಳು ಪೇಳು ॥

ಕೇ—

ಆದರೊಳನೆ ನಿನ್ನ ವಸ್ತುವಿನಲ್ಲಿ ಕೇಳು ॥ ೧ ॥

ಹೇ+ಕೇ—

॥ ಕಟಾವ ॥ (ರಗಳೆಯಂತೆ)

ಊರು ವಸ್ತುವೈ!
ಊರದರೊಳಗಿದೆ ।
ದೇಶವಸ್ತುವೈ ।

---

೧ ಕಪ್ಪಿ. ೨ ಹೊಲಮನೆ ಮುಂತಾದವು. ೩ ತೀವ್ರ.

ಭಾಷಣದಿಂ ಸಹ |
ವಾಸವಹುದು ಸಹ |
ವಾಸದಿಂದಲೈಕ್ಯಂ[೧] ಸಖ್ಯಂ || ೨ ||
ಸಖ್ಯದಿಂದ ಕೇಳ್ |
ಉತ್ಕೃಷ್ಟವಾಗುವ
ದೊಕ್ಕಟ್ಟಿಂದೆ ಮಹಾಕೃತಿಯು || ೩ ||
ಮಹಾಕೃತಿಗಳಿಂ |
ಸುಹಿತವು ದೇಶಕೆ |
ಸುಹಿತದಿ ಮಾನವಸಮರತ್ವಂ || ೪ ||

|| ಕಾಪಿ-ವಾಘ ||

ಭರತಭೂಮಿಯೊಳ್ ನಿನ್ನ ವಸ್ತುವು |
ಇರುವದಯ್ಯ ನೀಂ ನೋಡಿ ಪೇಳದಂ || ೧ ||

ಪ್ರ(-- (ಆಲೋಚಿಸಿ)

|| ಶ ಸ ||

ವಿಶಾಲದೇಶವು |
ಪ್ರಶಸ್ತ[೨]ವಸ್ತುಗ |
ಅಸಂಖ್ಯವಾಗಿಹವವುಗಳೊಳು ||
ಅಸಾಧ್ಯವರಸುವ[೩] |

---

೧ ಐಕ್ಯ = ಒಂದಾಗುವದು. ೨ ಉತ್ತಮ. ೩ ಅರಸು = ಹುಡುಕು.

ದಸಾಧ್ಯವಯ್ಯಾ |
ಉಸುರ್ವೆ ಯುಕ್ತಿವಿಶೇಷವನು || ೧ ||

ಕೇ—(ಮನಸ್ಸಿನಲ್ಲಿ)

|| ದ್ವಿಪದೆ ||

ಭರತಭೂಮಿಯ ಮಹಿಮೆಯಧಿಕವಾಗಿಹುದು |
ನೆರೆಂಪೆನ್ನ ಕಾರ್ಯಕ್ಕೆ ಜಯವು ಬರಬಹುದು ||೧||

ಯಾಕಂದರೆ——

|| ದ್ವಿಪದಿ ||

ನರರೊಲಾಚರಿಸ ತೊಡಗಿದುದಹಹ ಶೋ[1]ಕಂ
ಹರುಷಪಡೆಯದೆ ನೋಡಿ ನಮ್ಮದೀ ಲೋಕಂ ||೧||

(ಗಟ್ಟಿಸಿ) ನಿಂನ ವಸ್ತುವಿನ ಲಕ್ಷಣವನ್ನು ಹೇಳುತ್ತೇನೆ, ಕೇಳಿಕೊಂಡು ಹುಡುಕಿ ಹೇಳು——

|| ಪದ ||

ಕನ್ನಡೆ ಕನ್ನಡೆ |
ನಿನ್ನ ವಸ್ತುವದು |
ಕನ್ನಡೆ ಕೇಳ್ವೆ ಕನ್ನಡಿಗ || ಪಲ್ಲ ||
ಪಂಚವರ್ಣಗಳ |
ಪಂಚರೂಪಗಳ |
ಪಂಚಸ್ಥಲಗಳ ಕನ್ನಡೆಯ || ೧ ||

---

೧ ಕಷ್ಟ.

ಪಂಚಧ್ವನಿಗಳ |
ಪಂಚವಿನೋದದ |
ಪಂಚಗಾನಗಳ ಕನ್ನಡಿಯು || ೨ ||
ಪಂಚವೇಷಗಳ |
ಪಂಚಭೂಷಗಳ |
ಪಂಚಪ್ರಕಾಶದ ಕನ್ನಡಿಯು || ೩ ||

ಈ ನಿಂನ ಕನ್ನಡಿಯು ಸುತ್ತಲೂ ಕಾವಲವುಂಟು——

|| ಏ. ಪ ||

[೧]ಒಕ್ಕಡೆ ಚಿಕ್ಕವ |
ಳೊಕ್ಕಡೆ ದೊಡ್ಡವ |
ಳೊಕ್ಕಡೆ ಬಡಗೆರೆಯುಂಥವಳು ||

ಒಕ್ಕಡೆ ಮುನೀ[೨] |
ರಿಕ್ಕೊ ಕನ್ನಡಿಯ |
ನಿಕ್ಕದಲೆವೆಗಳ ಕಾವರೆಲ್ಲೆ || ೧ ||

**ಹೇ— (ಹುಡುಕಿ)**

|| ದ್ವಿಪದೆ ||

**ಅರಸಿ ದಣಿದೆನು ನಾನು ಪರಮದುರ್ಭಾಗ್ಯಂ |**
**ದೊರೆಯಲಿಲ್ಲದನು ನೋಡುವ ಭೂರಿಭಾಗ್ಯಂ || ೧ ||**

---

೧ ಒಕ್ಕಡೆ = ಒಂದು ಕಡೆ. ೨ ಸಮುದ್ರ.

ಕೇ---(ಮನಸ್ಸಿನಲ್ಲಿ)

|| ಭಾ ಷ. ||

ಭರತಭೂಮಿಯ ಮಹಿಮೆಯಂ ನೋ|
ಡಿರಿ! ಕಣಾ! ಸಂಚಾರದಿಂದಂ[೧]|
ಕುರಿಸಿತಿವನೊಳು ಭಾವಿಭಾಗ್ಯದ ಭೂರುಹದ
(ಗಟ್ಟಿಸಿ) ಬೀಜಂ ||೧||

|| ಶ. ಷ. ||

ನಿರಾಯಾಸದಿಂ | !
ನಿರೀಕ್ಷಿಸಯ್ಯಾ |
ನಿರೂಪಿಸುವೆ ಹೆಗ್ಗುರುತುಗಳಂ ||೧||
ಇಹಪರಸಾಧಕ |
ಮಹಾವಿಭವಗಳ |
ಮಹಾತ್ಮ್ಯೆಯುಳ್ಳಾ ಕಾವೇರಿ ||
ಮಹಾದಕ್ಷತೆಯ |
ವಹಿಸಿ ಕಾದು ಕೊಂ|
ಡಿಹಳಯ್ಯಾ ಚಿಂಕಣಗಡಿಯಂ ||೨||
ಕಿರಿ ಮೈಯ್ಯವಳಹ |
ವರ ಕಾವೇರಿಯ !
ಪರಾಕ್ರಮವ ಕಂಡೀರ್ಪೆಯನು ||

---

೧ ಅಂಕುರಿಸಿತು.

ಧರಿಸಿ ಬಡಗವಂ |
ನೆರೆ ಕಾವಳು ಕೇಳ್ |
ಗುರು ಗಾತ್ರದ ಗೋದಾವರೆಯು ||೨||
ಗಡ ಗೋದಾವರಿ |
ಕಡಲಂ ಮುದ್ದಿಸು |
ವೆಡೆಗೆ ಬಂದ ರೇವಾದೇವಿ ||
ನದಿ ಕಾವೇರಿಯು |
ನಡುವಿಂ ಬಡಗಕೆ |
ನಡೆದ ದಾರಿ ಮೂಡಣದ ಗಡಿ ||೩||
ನದಿ ಕೇಳ್ ಟೆಂಕಣ |
ಕಡೆಗಿತು ಕೊಂಕಣ |
ಮೊದಲೊಳ್ ದೊರೆದ ಶಿಲಾಲಿಪಿಯು ||
ಪಡುವಣ ಗಡಲೇ |
ನಡುಗಡೆಯೆಂಬುದ |
ನೊಡೆದಾಡುವದಾವಗಮೆಮಗೆ ||೪||

ಈ ಚತುಃಸೀಮೆಗಳೊಳಗೆ—

||ಸಾಕಿಯಂತೆ||

ಇದು ಮುಮ್ಬೈ ಕನ್ನಡ ಕೇಳ್ ಗೆಳೆಯಾ!
ಇದು ಮದ್ರಾಸದ ಕನ್ನಡವು ||
ಇದು ಮೈಸೂರವರಿಂಡಿಗನ್ನಡ ಮೇಣ್ |
ಇದು ಕೊಡಗದ ಕನ್ನಡ ಕಾಣ್ಕೆ ||೧||

ಇದು ಭಾಗ್ಯದ[೧] ನಗರದ ಕನ್ನಡಿ ಕೂ ।
ಡಿದರಿವು ನಿನ್ನಡಿ ಕನ್ನಡಿಯು ॥ ೩ ॥
ಈ ನಿನ್ನ ಇಡಿ ಕನ್ನಡಿಯ ಹೆಸರೇನೆಂದರೆ—

॥ ಶಿ. ಪ. ॥

ಕರ್ಣಾಟಕಮಿದು ।
ವರ್ಣನೀಯಮಿದೆ ।
ಕರ್ಣಾಟಕದೇವಿಗೆ ನಮಿಸು ॥ ೧ ॥

॥ ಪದ ॥

ರಕ್ಷಿಸು ಕರ್ಣಾಟಕ ದೇವಿಯೆ ನಂ ।
ರಕ್ಷಿಸು ಕರ್ಣಾಟಕ ದೇವಿ ॥ ಪಲ್ಲ ॥
*ಕದಂಬಾದಿಸಂಪೂಜಿತ ಚರಣೆ ।
ಗಂಗಾರಾಧಿತಪದನಖಕಿರಣೆ ।
ಚಲುಕ್ಯರುತ್ತಮಕಾಂಚೀಕಿರಣೆ ।
ರಾಷ್ಟ್ರಕೂಟಮಣಿ ಕಂಠಾಭರಣೆ ।
ಚಾಲುಕ್ಯಾಂಶುಕಶೋಭಾವರಣೆ ॥ ೧ ॥

---

॥ ಶಿ. ಪ. ॥

*ಸುಲಲಿತ ಸೊರಬದ ।
ತಾಳಕೊಂಡದಿಂ ।
ಸಲೆಮಯೂರಶರ್ಮಂ ವಿಪ್ರಂ ॥

೧ ಹೈದರಾಬಾದು.

ಯಾದವಮಣಿ ಕಂಕಣಾಂಶು ಸುಂದರಿ ।
ಬಲ್ಲಾಳರ ಭುಜಭೂಷಣ ಬಂಧುರೆ ।
ವಿಜಯನಗರ ಮಂಗಳಮಣಿ ಕಂಧರೆ ।
ಮೈಸೂರೊಡೆಯರ ಸುಕೀರ್ತಿಮಂದಿರೆ ।
ಮಾಂಡಲಿಕಾವನ ಭಾರಧುರಂಧರೆ ॥ ೩ ॥

ಮತಸ್ಥಾಪಕಸ್ಥಾಪಿತ ಪ್ರಾಣೆ ।
ಶಿಲ್ಪಕಲಾಮಂಡಪಸುಸ್ಥಾನೆ ।
ಕವಿಜನಕೀರ್ತಿತಸುಯಶಸ್ತ್ರಾಣೆ ।
ಸಾಧುಸತ್ಕಥಾ ಭೇರಿಧ್ವಾನೆ ।
ಸ್ವೇತಿಹಾಸನೀರಾಜನ ರಾಣೆ ॥ ೪ ॥

---

ಕಲಿಯಲು ವೇದಂ ।
ಗಳನ್ನು ಕಂಚೀ ।
ಪೊಳಲಿಗೆ ಬಂದ ಸಮಯದಲ್ಲಿ ॥ ೧ ॥
ವರಪಲ್ಲವ ಭೂ ।
ವರನವಮಾನಿಸ ।
ಲಿರದೆ ಕ್ಷತ್ರಿಯರ ಧರ್ಮವನು ॥
ಧರಿಸಿ ಕದಂಬರ[೧] ।
ಸರ ಹೊಸರಾಜ್ಯವ ।
ನೆರೆ ಬನೋಸಿಯೊಳ್ ಸ್ಥಾಪಿಸಿದಂ ॥ ೨ ॥

---

೧ ಕದಂಬ + ಅರಸರ. ೨ ಬನೋಸಿ = ಬನವಾಸಿ.

ಕೇ— ಗೆಳೆಯನೇ! ನಿನ್ನ ಕನ್ನಡಿಯ ಈ ಭಾಗವನು, ನೋಡು, ಏನೇನು ಕಾಣುತ್ತವೆ, ಹೇಳು.

ಹೇ— (ನೋಡಿ)

|| ಕಟಾವಿಸಂಕೆ ||

ಗಿರಿಗಳ್ ಝರಿಗಳ್ | ತೊರೆಗಳ್ ಕೆರೆಗಳ್ |
ಅರಣ್ಯಗಳ್ ಗ | ಹ್ವರಗಳ್ ಗುಹೆಗಳ್ ।
ತರುವಲ್ಲರಿಗಳ್ | ಖಗಮೃಗಗಳ್ ವಾ |
ನರಗಳ್ ಕಣ್ಣಿಗೆ | ತೋರುವವು ||೧||

ಕೇ— ಮತ್ತೂ ಏನೇನು ಕಾಣುತ್ತವೆ?

ಹೇ—

ಪುರಗಳ್ ಗುಡಿಗೋ । ಪುರಗಳ್ ಪೂರ್ವದ ।
ಅರಮನೆಗಳ್ ಶೂ । ರರ ಮನೆಗಳ್ ನಾ |
ಗರಿಕರ ಮನೆಗಳ್ | ಗರುಡೀಮನೆಗಳ್ |
ಕುರುಹಿನ ರೂಪದಿ | ತೋರುವವು ।। ೨ ||

ಕೇ— (ಮನಸ್ಸಿನಲ್ಲಿ)

|| ದ್ವಿಪದೆ ||

ಸಂಕಲ್ಪಿಸಿದ ವಸ್ತು ಕಾಣಿಸುವ ದೃಷ್ಟಿ |
ಅಂಕುರಿಸಿತಿವನೊಳನಗಾನಂದವೃಷ್ಟಿ ||೧||

(ಗಟ್ಟಿಸಿ) ಕರುಹಿನ ರೂಪದಿಂದಲೆಂದು ಅಂದದ್ದು ನಿಜ, ಯಾಕಂದರೆ, ಮೊದಲು ಇಲ್ಲಿ ಇದ್ದ —

|| ಶಾ. ವಿ. ವೃತ್ತ. ||

ಆಸೌಂದರ್ಯದ ರಾಜಧಾನಿಯಕಟಾ ಆ ರಾಜನಾ
ವೈಭವಂ ।
ಆ ಸಾಮಂತಸಮೂಹವಾ ಬುಧಸಭಾಸ್ಥಾನಂಗಳಾ
ಗ್ರಂಥಗಳ್ ॥
ಆ ಸೋಮಾಸನೆಯುರ್ ಪ್ರಮತ್ತನೃಪಪುತ್ರರ್ ಘೋಷಿ
ಪಾವಂದಿಗಳ್ ।
ಆ ಸರ್ವರ್ ಮರೆಯಾದರಾರವಶದಿಂದಾ ಕಾಲಗೀ
ಆದರೂ, ವಂದಸಂ ॥ ೧ ॥

|| ಶ ಷ. ||

ಕಾಳನ ಗಂಟಲ
ಗಾಳವಾಗಿ ತಾಂ |
ಬಾಳಿರುವೀ ದಿಬ್ಬಕೆ ನಮಿಸು ॥ ೧ ॥

| ದ್ವಿಪದೆ |

ಇದನು ನೋಡಿತ್ತಲಿದು ಸನ್ಯಾಸಿದಿಬ್ಬಂ |
ಇದರೊಳಿದ್ದನು ತಪಸಿ ಸನ್ಯಾಸಿಯೊಬ್ಬಂ[೧] ॥
ಅವನು ಮಾಡಿದನಗಾಧ ಕೃತಿಯನಬ್ಬ
ತವೆ ನನ್ನ ಕಣ್ಣುಗಳಿಗಿಂದು ಹಬ್ಬ ॥ ೨ ॥
ಅದರಿಂದಲಿದು ಪವಿತ್ರಸ್ಥಾನವೆನಗೆ |
ಇದರ ಮೃತ್ತಿಕೆಯನ್ನು ಧರಿಸುವೆನು ಹಣೆಗೆ ॥ ೩ ॥

---

೧ ಅಬ್ಬ = ಅಬಬ.

ಈ ಸನ್ಯಾಸಿ ಎಂಥವನೆಂದರೆ—

|| ಪದ್ಯ ||

ಅಪ್ರತಿಮ ತಾಪಸನು ।
ಅಪ್ರತಿಮ ಕರ್ಮಠನು ।
ಅಪ್ರತಿಮ ಭೂತದಯೆಯುಳ್ಳಾತನು ॥ ೧ ॥
ಅಪ್ರತಿಮ ಪಂಡಿತನು ।
ಅಪ್ರತಿಮ ಚತುರನೈ ।
ಅಪ್ರತಿಮ ವೇದಾಂತ ಸಿದ್ಧಾಂತಿಯು ॥ ೨ ॥
ಅಪ್ರತಿಮ ಧೈರ್ಯದವ ।
ನಪ್ರತಿಮ ಸಾಹಸಿಯು ।
ಅಪ್ರತಿಮ ರಾಜಕಾರಸ್ಥಾನಿಯು ॥ ೩ ॥
ಅಪ್ರತಿಮ ಗುಣವಂತ ।
ನಪ್ರತಿಮ ಧನವಂತ !
ನಪ್ರತಿಮತರವಾದ ದಾಸರೌಂಡಂ ॥ ೪ ॥
ವೈಭವೋತ್ಪಾದಕನು ।
ವೈಭವಸ್ಥಾಪಕನು ।
ವೈಭವದ ಚಾಲಕನು ತಾನೊಬಾಗಿ ॥ ೫ ॥
ವೈಭವದೊಳಿದ್ದು ಪರ ।
ವೈಭವವ ಸಾಧಿಸಿದ ।
ವೈಭವವ ತೋರಿಸಿದ ಪುಣ್ಯಾತ್ಮನು ॥ ೬ ॥

ಈ ಸನ್ಯಾಸಿಯ ಚರಿತ್ರವನ್ನು ಕೇಳು—

॥ ಪದ ॥

*ಜನಕನು ಮಾಯಣ ಬ್ರಾಹ್ಮಣನು ।
ಜನನಿಯು ಶ್ರೀಮತಿ ನಾಮಕಳು ॥ ೧ ॥
ಇವನಭಿಧಾನಂ ಮಾಧವನು ।
ಇವನಿಗೆ ತಮ್ಮನು ಸಾಯಣನು ॥ ೨ ॥

ಭೋಗನಾಥನು ಕಿರಿ ತಮ್ಮಂ ।
ಈಗ ಪೇಳ್ದನಿವರಾ ಸೊಮ್ಮಂ[1] ॥ ೩ ॥
ಗುರು ಸಾನಿಧಿಯೊಳಗೋದುತಲೇ ।
ಬರೆದರು ಗ್ರಂಥವ ಸಕ್ಕದಲಿ[2] ॥ ೪ ॥

ಮಾ—ಒಂದು ದಿವಸ ತಮ್ಮಂದಿರಿಗೆ,
ಹಸಿವೆಗೆ ಸಿಕ್ಕದನುಣಿಸಿದೆನು ।
ತೃಷೆಗೆ ಸಿಕ್ಕ ನೀರ್ ಕುಡಿಸಿದೆನು ॥ ೫ ॥

---

೧. ಸೊಮ್ಮು = ಭಾಗ್ಯ. ೨. ಸಂಸ್ಕೃತ.

* ಇವರು ರಚಿಸಿದ ಪರಾಶರ ಸ್ಮೃತಿಯ ವ್ಯಾಖ್ಯಾನದಲ್ಲಿ “श्रीमतिर्जननीयस्य सुकीर्तिर्मायणः पिता” ಎಂಬ ಶ್ಲೋಕವುಂಟು.

ಉರುಟು ಬಟ್ಟೆಯನ್ನುಡಿಸಿದೆನು ।
ಪಿರಿದೊಡಲೊಳು ಚಡಪಡಿಸಿದೆನು ॥ ೬ ॥

ಹೀಗೆ ಏಕೆ ಆದುದೆಂದರೆ—

೧ಕರಗುವಳೆಮ್ಮಂ ದೂಡಿದಳು ।

೨ಕರಗವವಳು ಕಾಪಾಡಿದಳು ॥ ೭ ॥

ಆದದ್ದರಿಂದ,

॥ [illegible] ॥

ಕರಗುವವಳನರಸಿ ಕರೆದುಕೊಂಡು ಬರುವೆನು ।
ಸುರಿಸಿ ಸುಖದ ಮಳೆಯ ಬಳಿಕ ಸ್ವಸ್ಥಮಿರುವೆನು ॥೧॥

॥ ದ್ವಿಪದಿ ॥

ತಲೆಯ ತಿರುಗಿತುದರಿಂ ಕಾಣಲಿಲ್ಲವಳು ।
ತಲೆಯ ತಿರುಹಿದರೆ ತಾನೇ ಕಾಣಿಸುವಳು ॥ ೧ ॥

ಭಾ. ಷ.

ಎಂದು ಪುಷ್ಪಾಕ್ಷೇತ್ರಕಾಗಲೆ ।
ಬಂದು ಭುವನೇಶ್ವರಿಯು ಮೆಚ್ಚಿಸ ।
ಲೆಂದು ಮಾಧವನುಗ್ರತಪವನ್ನಾಚರಿಸುತಿರ್ದಂ ॥
ಒಂದು ಪಟ್ಟಂ ಬೆಳೆಯ ದೇವಿಯು ।
ಬಂದಳು 'ವರಂಬ್ರೂಹಿ' ಯೆಂದಳು ।
ವಂದಿಸಿದನಾನಂದಪುಲಕಿತನಾಗಿ ಮಾಧವನು ॥ ೧ ॥

---

೧ ಲಕ್ಷ್ಮಿ. ೨ ಸರಸ್ವತಿ. ೩ ತಿರುಗಿದುದರಿಂ. ಇರುವುದರಿಂದ.

ನಂತರ ದೇವಿಯು ಸ್ತವನ ಮಾಡಿದನು —

|| ಪದ ||

ಜಯ ಜಯ ಜಯ ಭುವನೇಶ್ವರಿ || ಪಲ್ಲ ||

ಜಯ ಭುವನೇಶ್ವರಿ ।
ಜಯ ಮಾಹೇಶ್ವರಿ ।
ಜಯ ಕೃಪಾಕರೆ ।
ಶುಭಕರೆ ಶ್ರೀಕರೆ || [illegible] ||
ದರಿದ್ರತೆಯ ಸಂ ।
ಹರಿಸುವ ಸಿರಿಯಂ ।
ಕರುಣಿಸು ಭಕ್ತರ ।
ಸುರಭೂರುಹವೇ || ೧ ||

ದೇವೀ—

ಮೊರೆಯಿಡು ಜನ್ಮಾಂ ।
ತರವಿಲ್ಲದೆ ಕೇಳ್ ।
ಸಿರಿಯು ನಿನಗೆ ಭಜ ।
ಕರ ಶೇಖರನೇ || ೨ ||
ಪರರಿಗೆ ನೀನ್ನೈ ।
ವರಗಳನಿತ್ತರೆ ।
ಬರುವದು ಭಾಗ್ಯದ ।
ಸಿರಿಯುವರಿಗೆ ನಡೆ || ೩ ||

|| ದ್ವಿಪದಿ ||

ಇಂತೆಂದು ದೇವಿಯಂತರ್ಧಾನವಾದಳ್ ।
ಸಂತಪ್ತಾಣಾಂಗ್ರೈವು ಯೋಗಿನಾನಾಗಳ್ ॥ ೧ ॥
ಮರಳಿ ಸ್ವಗ್ರಾಮಕ್ಕೆ ಬರುವಾಗ ಮನದಲ್ಲಿ
ಮಾಧವನು—

|| ಪ. ಪ. ||

ಬರೆ ಮುಗಿಲಿಂ ಮಳೆ ।
ಬರುವದು ಬೇಗದ ।
ಕೆರೆಗೊಳು ತಾವರೆ ಬೆಳೆಯುವದು ॥
ಬರುವವು ಬಡವನ ।
ವರಬಲದಿಂದಂ ।
ದರಿದ್ರರಿಗೆ ಸಂಪತ್ತುಗಳು ॥ ೧ ॥
ಎಂದು ಅನ್ಯತ್ರ ಬರುವಾಗ—

|| ಸಾಕಿಪಂಕ್ತಿ ||

ಈಗಿನ ಭಾರತಿತೀರ್ಥರು ತನ್ನಯ ।
ಭೋಗನಾಥ ಪೂರ್ವಾಶ್ರಮದಿ ॥
ಈಗಿನ ವಿದ್ಯಾತೀರ್ಥರ ಪಟ್ಟಕೆ ।
ಭಾಗಿನೇಯರೇ ನಿಶ್ಚಯದಿ ॥ ೧ ॥
ಎಂದು ಕೇಳ್ದು ಶೃಂಗೇರಿಗೆ ಬಂದರು ।
ವಂದಿಸಿ ವಿದ್ಯಾತೀರ್ಥರಿಗೆ ॥

ಎಂದರು ಶ್ರೀಮದ್‌ಭಾರತೀತೀರ್ಥರ ।
ಸಂದರ್ಶನದಿ 'ಕೃತಾರ್ಥೋಽಹಂ' ॥ ೧ ॥

ವಿದ್ಯಾ—

॥ ಭಾ. ಷ. ॥

ಬಂದೆ! ಪಿತಿತಂ! ಮಾಧವನೆ! ಸುಖ ।
ದಿಂದಲಿರು! ಸಂಸ್ಥಾನ ನಿನ್ನದು ।
ಹೊಂದು ಶಾಂತಿಯನೆಂದು ವಿದ್ಯಾತೀರ್ಥರಾಡಿದರು ॥
ಅಂದೆ ಭುವನೇಶ್ವರಿಯು ಸ್ವಪ್ನದಿ ।
ಬಂದು ಸನ್ಯಾಸವನು ಮಾಧವ ।
ಹೊಂದು ವಿದ್ಯಾತೀರ್ಥರವರಿಂದೆಂದು ಹೇಳಿದಳು ॥೧॥

॥ ದ್ವಿಪದೆ ॥

ಮರುದಿನವೆ ಸನ್ಯಾಸವನ್ನು ಗ್ರಹಿಸಿದರು[೧] ।
ಪರಮ ವಿದ್ಯಾರಣ್ಯ ಸ್ವಾಮಿಯೆನಿಸಿದರು ॥ ೧ ॥
ವಿಹಿತ ವೇದಾಂತದೊಳ್ ಸಾಯಣನ ಕೂಡಿ ।
ವಿಹರಿಸುತ್ತಿರೆ ಬಂದನೋರ್ವನೋಡಿ ॥ ೨ ॥
ಸಾಹಸದಿ ಪರಿಯುತಿರೆ ಕಂಬನಿಯು ಕೋಡಿ ।
ಮೋಹಿಯಂತಿರ್ದನ್ಸೈ ಸಾಷ್ಟಾಂಗಮಾಡಿ ॥ ೩ ॥

೧ (೩೩) ೨ ಮರುಳ.

ವಿದ್ಯಾ—

॥ ಶ. ಷ. ॥

ನೋಡಿ ಸಂಜ್ಞೆಯನು ।
ಮಾಗಿ ಯಭಯವನು ।
ನೀಡಿ ಮಾತನಾಡಿವರಿಂತು ॥
ಬೇಡೈ ಹೆದರಿಕೆ ।
ಯಾಡೆಲ್ಲವ ಕೃಪೆ ।
ಮಾಡುವಳೈ ಭುವನೇಶ್ವರಿಯು ॥ ೧ ॥

ಹ—

ನೆರೆಯುತ್ತರದೊಳ್[೧] ।
ಜರಗಿದದ್ಭುತವ ।
ನೊರೆಯಲು ನಾಲಿಗೆಯೊಂದಿಹುದು ॥
ಗುರುವೆ ಸಮ್ಮ ದೇ ।
ವರ ಮೂರ್ತಿಗಳಂ ।
ಭರದಿ ಭಂಗಗೊಳಿಸಿದಹೊಡೆದು ॥ ೨ ॥

ಸಿರಿಯಂ ಸುಲಿದರು ।
ಶಿರೆಯು ಹಿಡಿದು ನಾ ।
ಗರಿಕರ ಕುಲವಂ ಕೆಡಿಸಿದರು ॥ ೩ ॥

---

೧ ಉತ್ತರ ಹಿಂದುಸ್ಥಾನದಲ್ಲಿ. ( ಗಜನಿ ಮಹಮುದ ೧೦೨೧ )

ಕಂಗಳುರಿದರೇ ।
೧ ಗಿಂಗಳವೊಲು ಕ ।
ರ್ಣಂಗಕೆಗಿಡಲೇಂ? ಸಿಡಿಲುಗಳು ।
ಹಂಗಳನೆಳೆದಳೆ ।
ದಂಗಳ ಬೀದಿಗೆ ।
ಭಂಗಗೊಳಿಸಿದರು ವ್ರತಗಳನು ॥ ೪ ॥

॥ ವಾ. ಸ. ॥

೨ ದೇವಗಿರಿಯುಂ ಮುತ್ತಿ ರಾಮದೇವನ ಗೆದ್ದು ।
೪ ಆ ವರಂಗಲ್ಲರಸನಿಂದ ಕಪ್ಪವ ಕೊಂಡು ।
೫ ತಾ ನಿಬಂಧಮುಂದ ಬಲ್ಲಾಳರಾಜರ ರಾಜಧಾನಿಯುಂ
ಸೂರೆಮಾಡಿ ॥ ೧ ॥

॥ ಭಾ. ಸ. ॥

೬ ದ್ವೀಪಗತವಂ ಕೊಂಡು ಶಂಕರ ।
ದೇವರಾಜನ ಕೊಲಿಸಿ ಕಾಪುರ ।
ಧ್ವಾಪಿಸಿದನೈ ಮುಂದೆ ರಾಮೇಶ್ವರದ ತೀರ್ಥಕ್ಕೆ ॥೧॥
ಪರಮ ಕ್ಷೇತ್ರಸ್ಥಲದಿ ರಾಮೇ ।
ಶ್ವರದಿ ಕಟ್ಟಿಸಿದಂ ಮಸೀದಿಯು ।
೭ ನೆರೆನಿನೋಡಲು ರಾಮಲಿಂಗನ ಗುಡಿಯು ಬದಿಯಲ್ಲಿ ।

---

೧ ತಿಂಗಳವೊ. ೨. ಬೆಂಕೆಯುರಾಗೆ. ೨. ಇದಲು. ಬದಿಯುಲು. ೩. ೧೪೮೬. ೪. ೧೩೦೯. ೫. ೧೩೧೦. ೬. ೧೩೧೨. ೭ ಜನಸಮೂಹ

॥ ಕಂ. ಪ. ॥

ಅಲಲಾ! ಕಣಾ ।

ಗಳು ತಿವ್ರದಾಗಲಿ

ಸುಳಿದರಹೋ ಪರಿಪಾಲನನು ॥

ಬಳಗಮೊಡನೆ ಶಿರೆ ।

ಯೊಳು ಸಿಲುಕಿದನೈ ।

ಬೆಳೆದ ಪ್ರೆರಂಗಲ್ಲರಸನಹೋ ॥

॥ ಕಾ. ಪ. ॥

ಅರಿದು ಬಿನ್ನಿಸ್ವರನು ದಿಷ್ಟಿಣ ।

ದರಸರೊಳ್-ಮಹಾರ್ಣವನು ಕಳುಹಿದ ।

ನಿರವೆ ನೇನೆಂಬನಿತ್ತ ಸಂಖ್ಯಾಲಿಕ್ಷಪರಿಮಿತಿಯು ॥

॥ ಶ. ಪ. ॥

ಬತ್ತುವಲಿದು ಬಿಂ ।

ಬತ್ತದ ಬೀಗೆಯು ।

ಹೊತ್ತಿ ಸುತ್ತುವಂತಪರಿಯುನು ॥

ಸುತ್ತಮುತ್ತಲೂ ।

ಬತ್ತಿ ಬಂದು ದಿಕ್ ।

ಮುತ್ತಿದುದಾನ್ನಿಗೊಂದೊಯನು ॥ ೧ ॥

---

(೧) ೧೭೧೮ (ಸುಬಾಲಿಕ) (೨) ೧೭೨೩ (ಮುಬಾರಿಕ್).

(೩) ೨೩೨೫ (ಮುಹಮುದ ತಗಲಖಿ).

ಹರವ ತುಂಬಿಕೊಂ ।
ಡಿರುವ ಯವನ ದಳ ।
ದುರುಟಿಯ ಸಹಿಸದೆ ತನ್ನವರು ॥
ತೆರವರ ಕೈಯೊಳ್ ।
ದೊರೆಯು ಬಾರದೆಂ ।
ದುರು ಸ್ವಾಭಿಮಾನದ ರಾಜಂ ॥ ೨ ॥
ಸಕಲೈಶ್ವರ್ಯವ ।
ತ್ರಿಪಿಗರ್ಪಿಸಿ ಜಂ ।
ಬುಕ್ಕೇಶ್ವರಂ ವೀರರದಿವಿಗೆ ॥
ಸುಖದಿಂ ತೆರಳಿದ ।
ನಕಟಾ! ದೈವದ ।
ಸುಕರತೆಯಿಂದಿಲ್ಲಿಗೆ ಬಂದೆಂ ॥ ೩ ॥
ಅರಸನಿಲ್ಲದಲೆ ।
ಅರಾಜಕತೆ ನಡೆ ।
ದಿರುವದು ದುಸ್ಸಹಮೆಲ್ಲಕಡೆ ।
ಒರೆಯುವ ನಾಲಿಗೆ ।
ಹರಿದರೆ ಲೇಸೈ ।
ಪರಮಾತ್ಮನೆ! ಹರಣಂ ವ್ಯರ್ಥಂ ॥ ೪ ॥
ಪರಸ್ಪರರೊಳಿಹ ।
ಪರಮದ್ವೇಷಂ ।
ಪರಿಣಮಿಸಿತು ಕಾಲೂರಲೆಡೆ ॥

ದೊರೆಯದಲಡವಿಯು ।
ತಿರುಗುತೆ ಬಂದೆನು ।
ಕರುಣಿಸಬೇಕು ಜಗದ್ಗುರುವೇ ॥ ೫ ॥
ಬೆಳೆದ ಪರಸ್ಪರ ।
ಕೊಳಗಿಸ ದ್ವೇಷವ ।
ಸುಳಿದೊಕ್ಕಟ್ಟನ್ನೀ ದೇಶಂ ॥
ತೆಳೆದುದ ನೋಟದ ।
ಬಳಿಕೀ ಪ್ರಾಣಂ ।
ಗಳು ಹೋದರೆ ಶಾಶ್ವತ ಸುಖವು ॥ ೬ ॥
ಬರಲಿಹ ದೇಶದ ।
ಸಿರಿಯನ್ನೆಲ್ಲೀಕ್ಷಿಸು ।
ತಿರುವವರಿಗೆ ದೇಹದ ಪರಿವೆ ॥
ಇರುವದೆ ಕಾಲವು ।
ಬರುವದನೇ ತಾವ್ ।
ನಿರೀಕ್ಷಿಸುತಲಿರುವದು ಗುರುವೇ ॥ ೭ ॥
ಪುರುಷತ್ವವನಾ ।
ಚರಿಸದೆ ಧುರದಿಂ ।
ತೆರಳೆ ಭವಿಷ್ಯತ್ಕಾಲದಲಿ ॥

---

೫ ಉಂದು-ಬಿಟ್ಟು   ೨ ಹೊಂದಿದ್ದನ್ನು.

ಅರಿಗಳ ಗೆಲ್ಲುವ ।
ಗುರುವಿಕ್ರಮದೊಳ ।
ಗರುವನೆನಿಸು ಪುರಹರರಾಜಂ ॥ ೮ ॥

॥ ದ್ವಿಪದೆ ॥

ಜಂಬುಕೇಶ್ವರನ ವಂಶಜನೈ ಪ್ರಧಾನಂ ।
ಜಂಬುಕಂ ಸಾಸೀಗಳ್ಗೆ ನಿರಸುಮಾನಂ ॥ ೧ ॥

॥ ಗೀತೆ ॥

ಬಳಯುತಿಪೆ ಪಾತಾಳಪಾತಕೆ ।
ತಿಳಿದ ಭಾರತದೇಶವು ॥
ಕಳೆಯುತಿಪೆ ಧರ್ಮಾಲಯದ ಜೊಂ।
ಗಳೆಸ, ಕನ್ನಡ, ಧ್ವಜಗಳು ॥ ೧ ॥
ಉದ್ಧರಿಸುವ ಮಹಾತ್ಮರಿಲ್ಲವೆ ।
ಇದ್ದರೇಕೆ ವಿಲಂಬವೈ ॥
ಎದ್ದು ಬನ್ನಿರಿ, ಭೂತದಂತೆ ಬದು ।
ಕಿಗ್ಗರದನೇ ತೋರಿರೈ ॥ ೨ ॥

ವಿದ್ಯಾ—(ಕೇಳಿ, ಮನಸ್ಸಿನಲ್ಲಿ)

॥ ಗೀತೆ ॥

ಏನಿವದ್ದು ತಪಪಪ!! ಧರ್ಮ ।
ಗ್ಲಾನಿಯೇ! ಭುವನೇಶ್ವರಿ! ॥
ಹಾನಿಯೇಕಾ! ರಾಜ್ಯಲಕ್ಷ್ಮಿಗೆ ।
ನೀನಿರಲು ಕೇಳ್ ಶ್ರೀಕರಿ ॥ ೧ ॥

ಏನಿದಕಟ! ಅಮಂಗಳೋದಯ! ।
ನೀನಿರಲು ಕೇಳ್ ಶುಭಕರಿ ॥
ಏನು ದುರ್ದಾಯುಭೋಗವಿದುಗಿದು ।
ನೀನಿರಲು ಸುಕೃಪಾಕರಿ ॥ ೨ ॥

(ಗಟ್ಟಿಸಿ)

॥ ಗೀತೆ ॥

ಏಳು ನಾಯಕಾ ಶಾಸ್ತ್ರ ಗ್ರಂಥವ ।
ನೋಡು ಪಂಪಾ ಕ್ಷೇತ್ರಕೆ ॥
ನಾಳೆಗಂಟುಗಳೆಂದಿದೇತಕೆ ।
ಏಳು ಈ ಕ್ಷಣಮಾತ್ರಕೆ ॥ ೧ ॥

ಒರಲಿ ಹರಿಹರರಾಜನೊ ನ ।
ಮ್ಮರಸನಾಗುವನೀತನೆ ॥
ಪರಿವೃಡಿವನಿಂದೆಮ್ಮ ದೇಶದ ।
ಪರಮಭಾಗ್ಯವಿಧಾತನೆ ॥ ೨ ॥

ಲಕ್ಷ ಶಾಸ್ತ್ರಗಳೇಕೆ ನಾಯಕ ।
ಲಕ್ಷ ಸೂತ್ರಗಳೇತಕೆ ॥
ಮೋಕ್ಷಸಂಪಾದನಕೆ ನಿಷ್ಠೆಯು ।
ಮೋಕ್ಷ ಕೇಳು ಸ್ವತಂತ್ರತೆ ॥ ೩ ॥

ಪಾರತಂತ್ರ್ಯವು ಮೋಕ್ಷಸುಖಕರ ।
ಕಾರಿಯದುವೆಯಧೋಗತಿ ॥

ಪಾರತಂತ್ರ್ಯಸ್ಥಿತಿಯ ಕುಲಸಂ ।
ಹಾರವೇ ಸುತಪಃಕ್ಕೃತಿ ॥ ೪ ॥
ಸ್ವತ್ವದರ್ಥವ ತಿಳಿಯದಲೆ ಬರೆ ।
ತತ್ವದರ್ಥಗಳೇತಕೆ ॥
ಸ್ವತ್ವವಂ ತಿಳಿಸದಲೆ ಲೋಕಕೆ ।
ತತ್ವಮಥನಗಳೇತಕ್ಕೆ ॥ ೫ ॥
ಸ್ವತ್ವವಂ ಪ್ರೀತಿಸದೆ ಬರಿದೆ ।
ತತ್ವದರ್ಶನವೇತಕ್ಕೆ ॥
ಸ್ವತ್ವವನ್ನಾಚರಿಸದೆ ನಿ ।
ಸ್ವತ್ವಜೀವನವೇತಕ್ಕೆ ॥ ೬ ॥
ಕಾಲವೇ ಹಾಲಾಹಲವು ಪ್ರತಿ ।
ಕೂಲವಾಗಿರುವಾಗಳ್ಕೆ ॥
ಕಾಲವೇ ಪೀಯೂಷವೆಮಗನು ।
ಕೂಲವಾಗಿರುವಾಗಳ್ಕೆ ॥ ೭ ॥
ಕ್ಷಣಸಮೂಹವೆ ಕಾಲಚಕ್ರವು ।
ಕ್ಷಣವು ಕಳೆದರೆ ದೊರೆಯದೈ ॥
ಕ್ಷಣವ ಸಾಧಿಸಿ ಕೊಂಡರೆಮಗದು ।
ಘನಸುಖವನೇ ಕರೆವುದೈ ॥ ೮ ॥

( ಏನಿತ್ತು )

॥ ೭ ಪರ್ದ ॥

ಭರದಿ ಹಂಪೆಗೆ ಬಂದು ಸರ್ವರಂ ಕರಿಸಿ ।

ಅರುಹಿ ಸ್ವರಾಜ್ಯತತ್ವವ ಪರಿಷ್ಕರಿಸಿ ॥ ೧ ॥

॥ ಶ. ಪ. ॥

ಸ್ವಭೂಮಿಯಿರುವದು ।
ಸ್ವಭಾಷೆಯಿರುವದು।
ಸ್ವಾಭಿಮಾನ ಚೇತನವಿಹುದು ॥ ೧ ॥
ಸ್ವದೇಶವಿರುವದು ।
ಸ್ವಧರ್ಮವಿರುವದು ।
ಸ್ವದೇಶಬಾಂಧವರೂ ಇಹರು ॥ ೨ ॥
ಸ್ವಧೈರ್ಯವಿರುವದು ।
ಸ್ವದೇಹವಿರುವದು ।
ಸ್ವದೈವಜೀವಗಳೂ ಇಹವು ॥ ೩ ॥

( ಇಷ್ಟಲ್ಲದೆ )

॥ ತ್ರಿಪದೆ ॥

ಪರಮ ಭುವನೇಶ್ವರಿಯ ಕರುಣಾರ್ದ್ರದೃಷ್ಟಿ ।
ಇರುವದೈ ಸುರಿಯುವದು ಕಾಂಚನದ ವೃಷ್ಟಿ ॥ ೧ ॥
ನಿಮ್ಮ ಭೂಮಿಯೊಳು ಸುರಿದಿರ್ದಲ್ಲ ಧನವು ।
ನಿಮ್ಮದೇ ಮಿಕ್ಕದೆಲ್ಲವು ರಾಜಧನವು ॥ ೨ ॥

॥ ಪದ್ಯ (ರಗಳೆಯಂತೆ) ॥

ಮಂಗಲಪ್ರದವಾದ ।
ತುಂಗಭದ್ರಾನದಿಯ

ದಕ್ಷಿಣ ತಟಾಕದಲಿ ।
ಲಕ್ಷಣೋತ್ತಮವಾದ ।
ರಾಜಧಾನಿಯ ಕಟ್ಟಿ ।
ರಾಜೋಪಚಾರಗಳ ।
ಸಾಮಗ್ರಿಗಳನ್ನೆಲ್ಲ ।
ಪ್ರೇಮದಿಂದಳವಡಿಸಿ[೧] ।
ಬರಲು ತಮ್ಮಾಶ್ರಮಪ್ರ ।
ಇರುವ ದಿಬ್ಬದ ಒಳಗೆ ।
ನೆರೆದೆಲ್ಲರುತ್ಸವದೊಳು ॥ ೧ ॥

॥ ದ್ವಿಪದಿ ॥

ಎಂದೊಡಂಬಡಿಸಿ ದೇವಾಲಯಕೆ ಬಂದು ।
ಅಂದು ಭುವನೇಶ್ವರಿಯ ಮುಂದೆ ಸತಿ ನಿಂದು ॥ ೧ ॥

॥ ಪದ ॥

ಜಯ ಜಯ ಜಯ ಭುವನೇಶ್ವರಿ ॥ ಪಲ್ಲ ॥
ಜಯ ಭುವನೇಶ್ವರಿ ।
ಜಯ ಮಾಹೇಶ್ವರಿ ।
ಜಯ ಕೃಪಾಕರೆ ।
ಶುಭಕರೆ ಶ್ರೀಕರೆ ॥ ಅನುಪಲ್ಲ ॥
ಅನಂತಕಾಲದ ।
ಅನಂತರೂಪದೆ ।

---

೧ ಅಳವಡಿಸಿ = ಸಿದ್ಧಪಡಿಸಿ.

ಅನಂತಕೃತ್ಯದ ।
ಅನಂತ ಮಹಿಮಳೆ ॥ ೧ ॥
ತ್ರಿಭುವನಭಾಗ್ಯದ ।
ಪ್ರಭುತ್ವ ನಿನ್ನದು ।
೧ ಪ್ರಭಾವ ನಿನ್ನದು ।
೨ ಪ್ರಭವಂ ನಿನ್ನದು ॥ ೨ ॥
ಭಕ್ತಸ್ವಸ್ತಿಯ ।
ಸೂಕ್ತಿವಿಮುಖರಿತ ।
ದಿಕ್ತಟಪೂರಿತ ।
ವ್ಯಕ್ತಚಿತ್ತಳೆ ॥ ೩ ॥
ಸ್ವರಾಜ್ಯಸ್ಥಾಪನೆ ।
ಗಿರುವಪವಸ್ಯವು ।
ಸುರಿಸೌ ಚಿನ್ನದ ।
ಸರಿಯುಂ ಕರುಣಾದಿ ॥ ೪ ॥
ಧರ್ಮಾತ್ಮಳು ನೀಂ ।
ಧರ್ಮದ ಜನನಿಯು ।
ಧರ್ಮಕೆ ಸುರಿಸೌ ।
೩ ಧರ್ಮದ ಮಳೆಯನು ॥ ೫ ॥

---

೧ ಸಾಮರ್ಥ್ಯ. ೨ ಉತ್ಪತ್ತಿ ೩ ಚಿನ್ನದ.

॥ ದ್ವಿಪದೆ ॥

ನಡೆದರಾಶ್ರಮಕಿಂತು ದೇವಿಯುಂ ಜೋಡಿ ।
ನಡೆ ಸುರಿದುದಾಗ ಹೊನ್ನಿನ ಮಳೆಯು ನೋಡಿ ॥ ೧ ॥

ಅಹೋ! ಈ ವಿದ್ಯಾರಣ್ಯರದು:—

॥ ದ್ವಿಪದಿ ॥

ಅದ್ಭುತ ಮಹಾಶಕ್ತಿ! ಯದ್ಭುತ ವಿರಕ್ತಿ ॥
ಅದ್ಭುತ ತಪಸ್ಸಿದ್ಧಿ! ಯದ್ಭುತಸಮೃದ್ಧಿ! ॥

ಎಂದು ಹೊಗಳುತ್ತ, ಜನರು ಏನು ಮಾಡಿದರೆಂದರೆ,—

॥ ಕಟಾವ ॥

ಅಟ್ಟಹಾಸದಿಂ ।
ಕಟ್ಟಿದವಾಗಳೆ ।
ಪಟ್ಟಣಪೇಟೆಗ ।
[1]ಅಟ್ಟಾಲಕಗಳು ।
[2]ಕಟ್ಟಾಳ್ ಮನೆಗಳು ।
ಅಟ್ಟ ಕಟ್ಟೆಗಳು ।
[3]ಕಟ್ಟೆ ಕಟ್ಟೆ ಜಸ ।
ವಟ್ಟ ಶಿಲ್ಪಿಗರ ।
[4]ದಿಟ್ಟಿಗಚ್ಚರಂ ।
ಪುಟ್ಟುವಂದಚಂದಗಳಿಂದ ॥ ೧ ॥

---

೧ ಕಟ್ಟಾಳ್ = ಶೂರ. ೨ ಅರಮನೆ. ೩ ಕೀರ್ತಿಪಡೆದ. ೪ ದೃಷ್ಟಿ

ಉತ್ತುಂಗಧ್ವಜ ।
ವೆತ್ತಿದವಾಗಳೆ ।
ಯೆತ್ತಲುಮೆಳೆದಳಿ ।
ರೊತ್ತಿದ ತೋರಣ ।
ದಿತ್ತರದೊಳು ಬೆಳ ।
ಗುತ್ತಿಹ ಕನ್ನಡಿ ।
ಸುತ್ತಲು ಶೋಭಿಪ ।
ಪುತ್ತಳಿಗಳ್ ನಗೆ।
ಪೆತ್ತುನೋಳ್ಪಬಲ್ ।
ಬಿತ್ತರದುರು ಸ್ವಸ್ತಿಕದಿಂದ ॥ ೨ ॥
ಮೇಲೆಲೆ ಗೊನೆಗಳ ।
ಬಾಳೆಯ ಕಂಬದ ।
ಸಾಲು ಹಂದರದ ।
ಮೇಲು ಮೊಗದ ಬದಿ ।
ಜೋಲುವ ಹೂವಿನ ।
ಮಾಲೆಯ [೧]ಬಂಡಿಗೆ ।
[೨]ಸೋಲುವ ಸುತ್ತುವ ।
[೩]ರೋಲಂಬಂಗಳ ।

---

೧ ಸುಗಂಧಕ್ಕೆ. ೨ ಇಚ್ಛಿಸುವ. ೩ ರೋಲಂಬ=ಗುಂಗಿಗಳ.

ಜಾಲವೆಂಬ ನವ ।
ನೀಲಮಣಿಯ ಮಾಲಿಕೆಯಿಂದ ॥ ೩ ॥
ಬಿಂಕದಿ ಪುರವನ ।
ಲಂಕರಿಸಿದರ್ಲೈ ।
ಕುಂಕುಮಪಂಕ ಕ।
ಲಂಕಿತಪತ್ರಗ ।
ಳಂ ಕಳಿಸುತೆ ಬುಧ
ರಂ ಕರಿಸಿದ್ಲೈ ।
ಬಿಂಕದ ಭುಜದ ।
ಪಾರ್ಂಕಿತ ನೃಪಕಲಿ ।
ಸಂಕುಲವಂ ಸಲೆ ।
ಸಂಕಲಿಸಿದರ್ಲೈ ಸಂತಸದಿ ॥೪॥
ಮಂಗಲಪಟ ಪು ।
ಷ್ಪಂಗಳಿಂದ ಸಲೆ ।
ಶೃಂಗರಿಸಿದ ಮಾ ।
ತಂಗ ತುರಂಗ ರ ।
ಥಂಗಳು ನಡೆಯಲು ।
ಮಂಗಳಮಯವಾ ।
ದ್ಯಂಗಳು ಸುತಿಯಲು ।
ಅಂಗನೆಯರು ಕಳ ।

ಮಂಗಳಾರತಿಯು ।
ನಂಗೈಯೊಳ್ ಪಿಡಿದೈತರಲು ॥ ೫ ॥
ಸುಂದರ ಛತ್ರಗ ।
ಳಂದದೊಳೆತ್ತಿರೆ ।
ವಂದಿ ಜನಂ ಜಯ ।
ವೆಂದು ಹೊಗಳುತಿರೆ ।
ಅಂದದಿ ಸರ್ವರು ।
ಬಂದಾ ದಿಬ್ಬಕೆ ।
ವಂದಿಸಿ ಜಯಜಯ ।
ವೆಂದು ಕಾಣಿಕೆಯು ।
ತಂದರ್ಪಿಸಿದರು ।
ಚಂದದಿ ವಿದ್ಯಾರಣ್ಯರಿಗೆ ॥ ೬ ॥

ಆಗ ವಿದ್ಯಾರಣ್ಯರು—

॥ ದಿಪದೆ ॥

ಅಂಬಾರಿಯೊಳಗೆ ಹರಿಹರನ ಕುಳ್ಳಿರಿಸಿ ।
ತುಂಬಿ ತುಳುಕುವ ದಿವ್ಯಸಂಭ್ರಮವ ವೆರಸಿ ॥ ೧ ॥
ಹೊಂದೇರೊಳೊಂದರೊಳು ಸಾಯಣನ ಕುಳಿರಿಸಿ ।
ಅಂದದಿಂದಣವ ತಾವಲಂಕರಿಸಿ ॥ ೨ ॥
ಭುವನೇಶ್ವರೀ ಮೂರ್ತಿಯು ಧ್ಯಾನಮಾಡಿ ।
ತವಕದಿಂದರಮನೆಗೆ ಸರ್ವರುಂ ಕೂಡಿ ॥ ೩ ॥

ಬಂದಿಳಿದು ಹರಿಹರನ ಕೈವಿಡಿಯುತಂದು ।
ಬಂದು ಸಿಂಹಾಸನದ ಮುಂದುಗಡೆ ನಿಂದು ॥ ೪ ॥

॥ ತ್ರಿಪದಿ ॥

ಇದಿಕೋ ಕರ್ಣಾ ।
ಟದ ಸಿಂಹಾಸನ ।
ವಿದನೇರ್ರೈ ಹರಿಹರ ರಾಜಾ! ॥
ಇದರಿಂ ಪರಮಾ ।
ಭ್ಯುದಯಂ ದೇಶಕೆ ।
೧
ಸ್ವಧರ್ಮಕಂ ರಾಜರ ರಾಜಾ! ॥ ೧ ॥
ಇದು ಸ್ವರಾಜ್ಯದ ।
ಸದಭಿಮಾನಮಣಿ ।
ವಿದಿತಕಿರೀಟಂ ರಾಜೇಂದ್ರ ।
ಇದನು ತೊಡಿಸುವೆವು ।
ಮುದದಿಂ ತವ ಶೀ ।
ರ್ಷದಲಿ ಸರ್ವಗುಣಗಣಸಾಂದ್ರ! ॥ ೨ ॥
ರಾಜಿಪ ಪುರವಿದು ॥
ವಿಜಯನಗರವೆ ।
ರಾಜಧಾನಿ ಕರ್ಣಾಟಕದ ॥

---

೧ ಸ್ವಧರ್ಮಕ್ಕೂ.

ಓಜಃಪ್ರಾಪ್ತಿಯು[1] ।
ರಾಜವಿಭವ ವಿ ।
ಭ್ರಾಜಿತಕೀರ್ತಿಯ ಕಾಂತಿಯಿದು[2] ॥ ೩ ॥

॥ ದ್ವಿಪದಿ ॥

ಇಂತಾದಿ[3] ಪಟ್ಟಾಭಿಷೇಕಮಂ ಮಾಡಿ ।
ಸಂತೋಷಬಟ್ಟರೈ ಕಣ್ದುಂಬ ನೋಡಿ ॥ ೧ ॥

ಆಗ ನೆರೆದ ಜನರು—

ಸರ್ವರುಚ್ಚಧ್ವನಿಗಳಿಂದ ಕೊಂಡಾಡಿ ।
ಸರ್ವರೂ ನಮಿಸಿದರು ಕಾಣಿಕೆಯ ನೀಡಿ ॥ ೨ ॥
ರಾಜರಿಂ ಮರ್ಯಾದೆಯಾದುದದೆಲ್ಲರಿಗೆ ।
ರಾಜಭಕ್ತಿಯು ಪುಟ್ಟಿತಾಗ ಸರ್ವರಿಗೆ ॥ ೩ ॥

ಆಗ ವಿದ್ಯಾರಣ್ಯಸ್ವಾಮಿಗಳು ಕೈಯೆತ್ತಿ—

॥ ಬ್ಯಾಂಡಿನ ಘಾಟಿಯಂತೆ ॥

॥ ಪದ ॥

ಇವುಗಳಿರಲಿ ನಿಂನ ರಾಜ್ಯದಲ್ಲಿ ರಾಜನೆ ।
ಇವುಗಳಿಂದೆ ಸೌಖ್ಯವುಂಟು ರಾಜರಾಜನೆ ॥ ಪಲ್ಲ ॥
ಸರ್ವಸಚಿವಬಹುಮತಾರ್ಥನಿರ್ಣಯೋಕ್ತಿಯು ।
ಸರ್ವಸೈನ್ಯಭಾರದಲ್ಲಿ ವೀರಶಕ್ತಿಯು ॥

೧. ಪರಾಕ್ರಮ. ೨. ಕಳೆ, ಸೌಂದರ್ಯ. ೩. ಮಾಡಿ.

ಸರ್ವಪ್ರಜಾಜನದಿ ವಿಮಲ ರಾಜ ಭಕ್ತಿಯು ।
ಸರ್ವಶತ್ರುಕುಲದಿ ಸಪರಿವಾರ ಮುಕ್ತಿಯು ॥ ೧ ॥

ಸರ್ವಮಾಂಡಲಿಕರು ಪರಸ್ಪರರನೊಲಿಸಲಿ ।
ಸರ್ವವ್ಯಾಪಾರಗಳಲಿ ಸಿರಿಯು ನೆಲಿಸಲಿ ॥
ಸರ್ವಕಪಿಗಳೆತ್ತಿ ಕೈಯ ನಿನ್ನ ಹರಸಲಿ ।
ಸರ್ವಸುಖದ ಶಾಂತವಿಠಲ ಸುಖವ ಸುರಿಸಲಿ ॥೨॥

॥ ದ್ವಿಪದಿ ॥

ಎಂದು ಹರಸಿದರು ಸಾಯಣನೊಡನೆ ಸಾಗಿ ।
ಬಂದರಾಶ್ರಮದೆಡೆಗೆ ಕೃತಕೃತ್ಯರಾಗಿ ॥ ೧ ॥

ಕೇ—

॥ ಶ. ಪ ॥

ಅರಸನಾದನೈ ।
ಹರಿಹರರಾಜನು ।
ನೆರೆ ತನ್ನಯ ವಸ್ತುವ ನೋಡಿ ॥

ವದ ವಿದ್ಯಾರ ।
ಣ್ಯಾರು ನಿರ್ಮಿಸಿದರು ।
ಸ್ವರಾಜ್ಯವಂ ವಸ್ತುವ ನೋಡಿ ॥ ೧ ॥

ಆ ವಸ್ತುಯಾವದೆಂದರೆ—

|| ಏಪದಿ ||

ದೇಶಭಾಷೇತಿಹಾಸಂಗಳಭಿಮಾನಂ ।
ಐಸಲೇ! ಧರ್ಮಸಂಜೀವಮಣಿದಾನಂ || ೧ ||

ನಾನು ನೋಡೆಂದು ಹೇಳುವ ನಿನ್ನ ವಸ್ತುವೂ ಇವೇ ಆದ್ದರಿಂದ,

|| ಪದ ||

ನಿನ್ನ ವಸ್ತುವನು ನೋಡು । ಗೆಳೆಯಾ ||

ಎಂಬ ಕೀರ್ತನಾರಂಭದಲ್ಲಿಯ ಉಪದೇಶದ ಪದವನ್ನು ಅಂದು ಕೀರ್ತನವನ್ನು ಮುಗಿಸಬೇಕು!!

|| **ಮಂಗಳಾರತಿಯ ಪದ** ||

ಜಯ ಮಂಗಲವೈ ।
ಜಯ ಮಂಗಲವೈ ।
ಜಯ ಜಯ ಜಯಜಯ ಮಂಗಲವೈ || ಪಲ್ಲ ||

ಮಂಗಲವೈ ಕ ।
ರ್ಣಾಟಕ ದೇಶಕೆ ।
ಕರ್ಣಾಟಕ ಸಿಂಹಾಸನಕೆ ||

ಮಂಗಲ ಕರ್ಣಾ।
ಟಕ ಕೀರ್ತಿಗೆ ಜಯ ।
ಮಂಗಲ ಕರ್ಣಾಟಕ ಕಳೆಗೆ || ೧ ||

ಮಂಗಲಪ್ಪೈ ಭುವ ।
ನೇಶ್ವರಿದೇವಿಗೆ ।
ಮಂಗಲ ಪಂಪಾಕ್ಷೇತ್ರಕ್ಕೆ ॥
ಮಂಗಲವಿದ್ಯಾ ।
ರಣ್ಯಸ್ವಾಮಿಗೆ ।
ಮಂಗಲ ಶಿವಂತವಿಠ್ಠಲಗೆ ॥ ೨ ॥

**ಕರ್ನಾಟಕಗ್ರಂಥಪ್ರಸಾರಕ ಮಂಡಲ**

# ಧಾರವಾಡ.

---

**ಶಿಕ್ಷಣ ಮೀಮಾಂಸೆ**

ಶ್ರೀ. ವೆಂಕಟೇಶ ಭೀಮರಾವ ಆಲೂರ ಮತ್ತು
ಶ್ರೀ. ವೆಂಕಟೇಶ ನರಶಿಂಹ ಮುಗದಾಳ ಇವರು
ಬರೆದ ಉದ್ಗ್ರಂಥ. ಬೆಲೆ ೨-೪-೦

---

**ಸಂಸಾರ ಸುಖ**

ಶ್ರೀ. ಹಣಮಂತ ಗೋವಿಂದ ದೇಶಪಾಂಡೆ ಇವರು
ಬರೆದ ಉದ್ಗ್ರಂಥ ಬೆಲೆ ೧-೪-೦

**ವೆಂಕಟೇಶ ಭೀಮರಾವ ಆಲೂರ**
ವಕೀಲ ಧಾರವಾಡ.